ಸಂಪುಟ: 11 ಸಂಚಿಕೆ: 228 ಪುಟಗಳು: 4+2 ಬೆಲೆ: ₹ 3.00 ಶುಕ್ರವಾರ, ಅಕ್ಟೋಬರ್ 16, 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 228 Pages : 4+2 Rate : 3.00 Friday, October 16, 2026 Gadag RNI No : KARKAN/2015/63412 E-mail: vijayasakshidaily@gmail.com Post Regn.No: GDG/72/2020-22

### 10 ದಿನದೊಳಗೆ ಮರುಪರಿಶೀಲನೆ ಕಡ್ಡಾಯ

## ಗೃಹಜ್ಯೋತಿ ಗ್ರಾಹಕರಿಗೆ ಹೆಸ್ಕಾಂ ಡೆಡ್‌ಲೈನ್

**ವಿಜಯಸಾಕ್ಷಿ ಸುದ್ದಿ, ಗದಗ**

ಗೃಹಜ್ಯೋತಿ ಯೋಜನೆಯ ಸೌಲಭ್ಯ ಪಡೆಯುತ್ತಿರುವ ಗ್ರಾಹಕರೇ ಗಮನಿಸಿ. ನಿಮ್ಮ ಮನೆಗೆ ಬೀಗ ಹಾಕಿರುವ ಅಥವಾ ಮನೆ ಖಾಲಿ ಇರುವುದಾಗಿ ಹೆಸ್ಕಾಂ ಸರ್ವೆಯಲ್ಲಿ ದಾಖಲಾಗಿದ್ದರೆ, ಇನ್ನೂ 10 ದಿನಗಳೊಳಗೆ ಸ್ಥಳೀಯ ಹೆಸ್ಕಾಂ ಕಚೇರಿಗೆ ಭೇಟಿ ನೀಡಿ ಮರುಪರಿಶೀಲನೆ ಪೂರ್ಣಗೊಳಿಸಿ.

ಗದಗ ಹೆಸ್ಕಾಂ ವಿಭಾಗದ ವ್ಯಾಪ್ತಿಯ ಗದಗ, ಮುಂಡರಗಿ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕುಗಳಲ್ಲಿ ನಡೆದ ಸರ್ವೆ ವೇಳೆ ಮನೆಗೆ ಬೀಗ ಹಾಕಿರುವ 8,421 ಪ್ರಕರಣಗಳು ಹಾಗೂ ಮನೆ ಖಾಲಿ ಇರುವ 2,710 ಪ್ರಕರಣಗಳು ಪತ್ತೆಯಾಗಿವೆ. ಒಟ್ಟು 11,131 ಪ್ರಕರಣಗಳು ದಾಖಲಾಗಿದ್ದು, ಈ ಗ್ರಾಹಕರ ಸ್ಥಾವರಗಳ ಮರುಪರಿಶೀಲನೆಗೆ ಇಂಧನ ಇಲಾಖೆ ನಿರ್ದೇಶನ ನೀಡಿದೆ.

ಸಂಬಂಧಪಟ್ಟ ಗ್ರಾಹಕರು ನಿಗದಿತ 10 ದಿನಗಳೊಳಗಾಗಿ ತಮ್ಮ ಸ್ಥಳೀಯ ಹೆಸ್ಕಾಂ ಕಚೇರಿಗೆ ಭೇಟಿ ನೀಡಿ ಅಗತ್ಯ ದಾಖಲೆ ಹಾಗೂ ಮಾಹಿತಿಯನ್ನು ಒದಗಿಸಿ ಮರುಪರಿಶೀಲನಾ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಸರ್ವೆಯಲ್ಲಿ ಮನೆ ಬೀಗ ಹಾಕಿರುವ ಅಥವಾ ಖಾಲಿ ಇರುವುದಾಗಿ ದಾಖಲಾಗಿರುವ ಗೃಹಜ್ಯೋತಿ ಗ್ರಾಹಕರು ಈ ಸೂಚನೆಯನ್ನು ನಿರ್ಲಕ್ಷಿಸದೆ, ನಿಗದಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಹೆಸ್ಕಾಂ ಗದಗ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

## ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ: ಇಂದು ಸಭೆ

**ವಿಜಯಸಾಕ್ಷಿ ಸುದ್ದಿ, ಗದಗ**

ಅಕ್ಟೋಬರ್ 23ರಂದು ಆಚರಿಸಲಾಗುವ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮದ ಪೂರ್ವಸಿದ್ಧತೆ ಕುರಿತು ಅಕ್ಟೋಬರ್ 16ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸರ್ಕಾರದ ಆದೇಶದನ್ವಯ ಪ್ರತಿವರ್ಷದಂತೆ ಈ ವರ್ಷವೂ ಜಯಂತಿ ಆಚರಿಸಲಾಗುತ್ತಿದ್ದು, ಸಭೆಗೆ ಸಂಬಂಧಪಟ್ಟವರು ಹಾಜರಾಗಿ ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ನೀಡಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದಿನ ನೀರು ಪೂರೈಕೆ ವಿವರ

**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದ ವಿವಿಧ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಅಕ್ಟೋಬರ್ 16ರಂದು ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ಡ್ ನಂ. 31, 32 ಮತ್ತು 23ರ ನರಗುಂದ ಲೈನ್, ಧಾರವಾಡರ ಲೈನ್, ಹಾಳೆ ಕಚೇರಿ, ಖಿಲ್ಲಾ ಓಣಿ, ತ್ರಿಕೋಟೇಶ್ವರ ದೇವಸ್ಥಾನ, ಸುಣಗಾರ ಓಣಿ, ಕುದರಿಯವರ ಲೈನ್, ಡಂಬಳ ಇವರ ಲೈನ್, ಗುಜ್ಜರ ಬಸ್ತಿ, ಅಣಸಿನ ಓಣಿ ಹಾಗೂ ದೀಪಕ್ ಗ್ಯಾರೇಜ್ ಲೈನ್‌ಗಳಿಗೆ ನೀರು ಪೂರೈಸಲಾಗುವುದು.

ವಾರ್ಡ್ ನಂ. 30ರ ಟಿವಿಎಸ್ ಶೋರೂಂ, ಮುತ್ತಿನ ಪೆಂಡಿಯವರ ಲೈನ್, ಪೊಲೀಸ್ ಕ್ವಾರ್ಟರ್ಸ್, ಪುಟ್ಟರಾಜ ನಗರ, ರರೋಣದವರ ಲೈನ್ ಹಾಗೂ ಪಾಸ್ತಿಯವರ ಲೈನ್‌ಗಳಿಗೆ ನೀರು ಪೂರೈಕೆಯಾಗಲಿದೆ.

ವಾರ್ಡ್ ನಂ. 27ರ ಮಾಕೋಟೇಶ್ವರ ಲೈನ್ ಮತ್ತು ಉಳಿದ ಭಾಗಗಳು, ವಿಆರ್‌ಎಲ್ ಕಚೇರಿ ಲೈನ್, ವಾರ್ಡ್ ನಂ. 2ರ ಸೆಟ್ಲಮೆಂಟ್, ಹಾಕಿ ಗ್ರೌಂಡ್, ಕುಷ್ಟಗಿ ಚಾಳ ಹಾಗೂ ಮಾನ್ವಿ ಚಾಳ, ವಾರ್ಡ್ ನಂ. 22ರ ವಿಜಯನಗರ ಶಾಲೆಯ ಕೆಳಗಿನ ಭಾಗಗಳು, ವಾರ್ಡ್ ನಂ. 27ರ ಕೆ.ಎಚ್.ಪಾಟೀಲ ಬಡಾವಣೆ ಮತ್ತು ವೀರನಾರಾಯಣ ಬಡಾವಣೆಗಳಿಗೂ ನೀರು ಪೂರೈಸಲಾಗುವುದು.

ವಾರ್ಡ್ ನಂ. 29ರ ರಾಜೀವಗಾಂಧಿ ನಗರದ ಕೆಳಗಿನ ಭಾಗ, ಗುಡಿಮನಿ-ಭಾಂಡಗೆ ಲೈನ್ ಹಾಗೂ ಉಳಿದ ಭಾಗಗಳು, ವಾರ್ಡ್ ನಂ. 6ರ ಪಂಪಣ್ಣವರ ಲೈನ್ ಮತ್ತು ನಾವಳ್ಳಿಯವರ ಲೈನ್, ವಾರ್ಡ್ ನಂ. 7ರ ಪಂಚಾಕ್ಷರಿ ಬಡಾವಣೆಯ ನಾಲ್ಕು ಭಾಗಗಳು, ವಾರ್ಡ್ ನಂ. 28ರ ಸೂಲಾಪಟ್ಟಿ ಲೈನ್, ಕೃಷ್ಣಾ ಪಾಟೀಲ ಸರ್ ಲೈನ್ ಮತ್ತು ಮಸಾರಿ ಭಾಗಗಳಿಗೂ ನೀರು ಪೂರೈಕೆಯಾಗಲಿದೆ.

ಇದರೊಂದಿಗೆ ವಾರ್ಡ್ ನಂ. 30, 34 ಮತ್ತು 35ರ ವಡ್ಡರಗೇರಿ, ನೀಲಮ್ಮ ತಾಯಿಮಠದ ಮೊದಲನೇ ಕ್ರಾಸ್, ಹೂಗಾರ ಪ್ಲಾಟ್, ಪಂಜರಪೌಳಿ, ಹುಡ್ಕೊ ಹಾಗೂ ಉಳಿದ ಭಾಗಗಳಿಗೆ ನೀರು ಪೂರೈಸಲಾಗುವುದು. ತಾಂತ್ರಿಕ ಕಾರಣಗಳಿಂದ ನೀರು ಪೂರೈಕೆಯಲ್ಲಿ ಅಡಚಣೆ ಉಂಟಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಮನವಿ ಮಾಡಿದ್ದಾರೆ.

## ನೌಕರರ ಸೇವಾ ಭದ್ರತೆಗೆ ಆಗ್ರಹಿಸಿ ಇಂದು ಬೆಂಗಳೂರಿನಲ್ಲಿ ಪ್ರತಿಭಟನೆ

**ವಿಜಯಸಾಕ್ಷಿ ಸುದ್ದಿ, ಗದಗ**

ವಿಬಿ-ಜಿ ರಾಮ್‌ಜಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ 3,657ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಹಾಗೂ ಹುದ್ದೆಗಳ ಖಾಯಂಗೊಳಿಸುವಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಹಾತ್ಮಗಾಂಧಿ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಇಂದು (ಅ.16) ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಕಳೆದ 12ರಿಂದ 15 ವರ್ಷಗಳಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ದುಡಿಯುತ್ತಿರುವ ನೌಕರರಿಗೆ ಸೇವಾ ಭದ್ರತೆ ಇಲ್ಲದಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ನೌಕರರ ಮುಂದುವರಿಕೆಗೆ ಅಧಿಕೃತ ಆದೇಶ, ಸಮಾನ ಕೆಲಸಕ್ಕೆ ಸಮಾನ ವೇತನ, ವೇತನ ಹೆಚ್ಚಳ, ನೇಮಕಾತಿಯಲ್ಲಿ ಆದ್ಯತೆ, ವಯೋಮಿತಿ ಸಡಿಲಿಕೆ, ಪ್ರಯಾಣ ಭತ್ಯೆ ಹಾಗೂ ಪಿಎಫ್ ದುರುಪಯೋಗಪಡಿಸಿಕೊಂಡ ಏಜೆನ್ಸಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಘ ಒತ್ತಾಯಿಸಿದೆ.

### ಅರ್ಥಪೂರ್ಣ, ವ್ಯವಸ್ಥಿತ ಆಚರಣೆಗೆ ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಸೂಚನೆ

# ಕನ್ನಡ ರಾಜ್ಯೋತ್ಸವಕ್ಕೆ ಸಕಲ ಸಿದ್ಧತೆ ಕೈಗೊಳ್ಳಿ

**ವಿಜಯಸಾಕ್ಷಿ ಸುದ್ದಿ, ಗದಗ**



ಜಿಲ್ಲೆಯಲ್ಲಿ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ, ವ್ಯವಸ್ಥಿತವಾಗಿ ಹಾಗೂ ಸಂಭ್ರಮದಿಂದ ಆಚರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ಕನ್ನಡ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯೋತ್ಸವದ ಯಶಸ್ವಿ ಆಚರಣೆಗಾಗಿ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಪ್ರತಿಯೊಂದು ಸಮಿತಿಯೂ ತನಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು. ರಾಜ್ಯೋತ್ಸವದ ಹಿಂದಿನ ದಿನ ಹಾಗೂ ನವೆಂಬರ್ 1ರಂದು ಸರ್ಕಾರಿ ಕಚೇರಿಗಳು ಮತ್ತು ನಗರದ ವಿವಿಧ ವೃತ್ತಗಳಲ್ಲಿ ಸ್ವಚ್ಛತೆ ಕೈಗೊಂಡು ವಿದ್ಯುತ್ ದೀಪಾಲಂಕಾರ ಮಾಡಬೇಕು. ಕಾರ್ಯಕ್ರಮ ನಡೆಯುವ ಸ್ಥಳದ ಸ್ವಚ್ಛತೆ, ಶಿಷ್ಟಾಚಾರದಂತೆ ಆಸನ ವ್ಯವಸ್ಥೆ, ವೇದಿಕೆ ಅಲಂಕಾರ ಹಾಗೂ ಸನ್ಮಾನ ಕಾರ್ಯಕ್ರಮಗಳಲ್ಲಿ ಯಾವುದೇ ಲೋಪದೋಷಗಳಾಗದಂತೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಅಂದು ಬೆಳಿಗ್ಗೆ 7.30ಕ್ಕೆ ಗದಗ-ಬೆಟಗೇರಿ ನಗರಸಭೆಯ ಪದವಿಪೂರ್ವ ಕಾಲೇಜು ಆವರಣದಿಂದ ಕಲಾತಂಡಗಳೊಂದಿಗೆ ತಾಯಿ ಭುವನೇಶ್ವರಿಯ ಮೆರವಣಿಗೆ ಆರಂಭವಾಗಲಿದೆ. ನಗರದ ವಿವಿಧ ವೃತ್ತಗಳಲ್ಲಿ ಸಂಚರಿಸುವ ಮೆರವಣಿಗೆ ಜಿಲ್ಲಾ ಕ್ರೀಡಾಂಗಣ ತಲುಪಲಿದೆ. ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಸಾರ್ವಜನಿಕ ಧ್ವಜಾರೋಹಣ ನೆರವೇರಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಗದಿತ ಸಮಯಕ್ಕೆ ಕಡ್ಡಾಯವಾಗಿ ಹಾಜರಿರಬೇಕು ಎಂದು ಸೂಚಿಸಿದರು.

ಪೊಲೀಸ್ ಪಡೆ, ಹೋಮ್‌ಗಾರ್ಡ್ ಹಾಗೂ ಭಾರತ ಸೇವಾದಳದಿಂದ ಪರೇಡ್ ಮತ್ತು ಪಥಸಂಚಲನ ನಡೆಯಲಿವೆ. ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ಇಲಾಖೆಗಳ ಸ್ತಬ್ಧಚಿತ್ರಗಳ ಪ್ರದರ್ಶನ ಅಚ್ಚುಕಟ್ಟಾಗಿ ನಡೆಯುವಂತೆ ಕ್ರಮ ಕೈಗೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಂಘ-ಸಂಸ್ಥೆಗಳ ಸದಸ್ಯರು ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಭಾಗವಹಿಸುವಂತೆ ಪ್ರೇರೇಪಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಮಾತನಾಡಿ, ಶಿಷ್ಟಾಚಾರದಂತೆ ಅತಿಥಿ ಗಣ್ಯರಿಗೆ ಆಹ್ವಾನ ನೀಡುವುದು ಹಾಗೂ ಆಮಂತ್ರಣ ಪತ್ರಿಕೆ ಮುದ್ರಣಕ್ಕೆ ಕ್ರಮ ಕೈಗೊಳ್ಳಬೇಕು. ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕುಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್.ಎನ್., ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಕಾರ್ಮಿಕ ಇಲಾಖೆ ಅಧಿಕಾರಿ ಶ್ರೀಶೈಲ ಸೋಮನಕಟ್ಟಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶರಣು ಗೋಗೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಬಿ.ಮಸನಾಯಕ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರುಡಿ, ಡಿಡಿಎಲ್‌ಆರ್ ರುದ್ರನಗೌಡ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಎಂ.ಎಂ.ತುಂಬರಮಟ್ಟಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಸಂಭ್ರಮದಿಂದ ಆಚರಿಸಬೇಕು. ಕಾರ್ಯಕ್ರಮದಲ್ಲಿ ಯಾವುದೇ ಲೋಪಗಳಾಗದಂತೆ ವಿವಿಧ ಸಮಿತಿಗಳು ತಮಗೆ ವಹಿಸಿದ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿ, ರಾಜ್ಯೋತ್ಸವದ ಯಶಸ್ಸಿಗೆ ಶ್ರಮಿಸಬೇಕು.
> – ಸಿ.ಎನ್.ಶ್ರೀಧರ್, ಜಿಲ್ಲಾಧಿಕಾರಿ

### ತಾಲೂಕುವಾರು 35ರಿಂದ 40 ವಿದ್ಯಾರ್ಥಿಗಳ ಆಯ್ಕೆಗೆ ಜಿಲ್ಲಾಧಿಕಾರಿ ಸೂಚನೆ

## ವಿದ್ಯಾರ್ಥಿಗಳಿಗೆ ಯುವ ಸಂಸತ್ತಿನ ಪಾಠ

**ವಿಜಯಸಾಕ್ಷಿ ಸುದ್ದಿ, ಗದಗ**



ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯ, ಸಂಸದೀಯ ವ್ಯವಸ್ಥೆ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವ ಉದ್ದೇಶದಿಂದ ಜಿಲ್ಲಾ ಮಟ್ಟದ ಮಾದರಿ ಯುವ ಸಂಸತ್ತು ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ಆಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದ ಕೋರ್ಟ್ ಹಾಲ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲ ತಾಲೂಕುಗಳ ವಿದ್ಯಾರ್ಥಿಗಳಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ತಾಲೂಕು ಮಟ್ಟದಲ್ಲಿ ಪೂರ್ವಸಿದ್ಧತಾ ಸಭೆಗಳನ್ನು ನಡೆಸಬೇಕು. ಪ್ರತಿ ತಾಲೂಕಿನಿಂದ ಸುಮಾರು 35ರಿಂದ 40 ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ಅವರ ಆಯ್ಕೆ ಹಾಗೂ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಒಗ್ಗೂಡಿಸಿ ಅಂತಿಮ ಕಾರ್ಯಕ್ರಮ ಆಯೋಜಿಸಬೇಕು. ಕಾರ್ಯಕ್ರಮದ ದಿನಾಂಕ ನಿಗದಿ, ವಿದ್ಯಾರ್ಥಿಗಳ ಭಾಗವಹಿಸುವಿಕೆ ಹಾಗೂ ಸುಗಮ ನಿರ್ವಹಣೆಗೆ ಅಗತ್ಯವಿರುವ ಎಲ್ಲ ಪೂರ್ವಸಿದ್ಧತೆಗಳನ್ನು ಪೂರ್ಣಗೊಳಿಸಬೇಕು. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸೂಚಿಸಿದರು. ಯುವ ಸಂಸತ್ತು ವಿದ್ಯಾರ್ಥಿಗಳಿಗೆ ಕೇವಲ ಕಾರ್ಯಕ್ರಮವಲ್ಲ, ಪ್ರಜಾಪ್ರಭುತ್ವದ ಕಾರ್ಯವೈಖರಿಯನ್ನು ಪ್ರಾಯೋಗಿಕವಾಗಿ ಅರಿಯುವ ವೇದಿಕೆಯಾಗಿದೆ. ಸಂಸದೀಯ ವ್ಯವಸ್ಥೆ, ಜನಪ್ರತಿನಿಧಿಗಳ ಜವಾಬ್ದಾರಿ ಹಾಗೂ ಸದನದ ಕಲಾಪಗಳ ಕುರಿತು ತಿಳಿದುಕೊಳ್ಳುವುದರ ಜತೆಗೆ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಚರ್ಚಿಸುವ ಸಾಮರ್ಥ್ಯ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ಯುವ ಸಂಸತ್ತಿನಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿ, ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.
> – ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ, ಗದಗ

### ಚುನಾವಣಾ ನೀತಿ ಸಂಹಿತೆ ಹಿನ್ನೆಲೆ ಕ್ರಮಕ್ಕೆ ಜಿಲ್ಲಾಧಿಕಾರಿ ಶ್ರೀಧರ್ ಸೂಚನೆ

## ವಾಲ್ಮೀಕಿ ಜಯಂತಿ ಸಾಂಕೇತಿಕ ಆಚರಣೆಗೆ ನಿರ್ಧಾರ

**ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಅಕ್ಟೋಬರ್ 26ರಂದು ನಡೆಯುವ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾಡಳಿತದ ವತಿಯಿಂದ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಗುರುವಾರ ನಡೆದ ಜಯಂತಿಯ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿವರ್ಷದಂತೆ ಈ ಬಾರಿಯೂ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಉದ್ದೇಶಿಸಲಾಗಿತ್ತು. ಆದರೆ, 2026ರ ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಜಿಲ್ಲಾಡಳಿತದ ವತಿಯಿಂದ ಸಾಂಕೇತಿಕವಾಗಿ ಆಚರಿಸಲಾಗುವುದು. ಚುನಾವಣೆಯ ನಂತರ ಸಮಾಜದವರು ಅದ್ದೂರಿಯಾಗಿ ಜಯಂತಿ ಆಚರಿಸಬಹುದು. ಸಮಾಜದ ಮುಖಂಡರು ಹಾಗೂ ಹಿರಿಯರು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸರ್ವೆ ವೇಳೆ ಜಾಗ ಕೆರೆಯ ಹೊರಭಾಗದಲ್ಲಿರುವುದು ದೃಢಪಟ್ಟರೆ ವೃತ್ತ ಹಾಗೂ ಪುತ್ಥಳಿ ನಿರ್ಮಾಣಕ್ಕೆ ಅನುಮತಿ ನೀಡಲಾಗುವುದು. ಜಾಗ ಕೆರೆಯ ವ್ಯಾಪ್ತಿಯೊಳಗೆ ಬಂದರೆ ಸರ್ಕಾರಕ್ಕೆ ಪತ್ರ ಬರೆದು ವಾಲ್ಮೀಕಿ ವೃತ್ತ ನಿರ್ಮಾಣ ಹಾಗೂ ಪುತ್ಥಳಿ ಪ್ರತಿಷ್ಠಾಪನೆಗೆ ಅಗತ್ಯ ಸಹಕಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಸ್ಥಳದಲ್ಲಿ ಸಾರ್ವಜನಿಕರು ಕಸ ಹಾಕದಂತೆ ನೋಡಿಕೊಳ್ಳಲು ನಗರಸಭೆ ಪೌರಾಯುಕ್ತರಿಗೆ ಸೂಚಿಸಿದರು.

> ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ವಾಲ್ಮೀಕಿ ಜಯಂತಿಯನ್ನು ಸಾಂಕೇತಿಕವಾಗಿ ಆಚರಿಸಲಾಗುವುದು. ವಾಲ್ಮೀಕಿ ವೃತ್ತದ ಜಾಗವನ್ನು ಸರ್ವೆ ಮಾಡಿಸಿ, ಅದು ಕೆರೆಯ ವ್ಯಾಪ್ತಿಗೆ ಒಳಪಡುತ್ತದೆಯೇ ಎಂಬುದನ್ನು ಪರಿಶೀಲಿಸಿದ ಬಳಿಕ ವೃತ್ತ ಹಾಗೂ ಪುತ್ಥಳಿ ನಿರ್ಮಾಣದ ಕುರಿತು ಕ್ರಮ ಕೈಗೊಳ್ಳಲಾಗುವುದು.
> – ಸಿ.ಎನ್. ಶ್ರೀಧರ್, ಜಿಲ್ಲಾಧಿಕಾರಿ, ಗದಗ

## ಎಸ್‌ಐಆರ್ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ

**ವಿಜಯಸಾಕ್ಷಿ ಸುದ್ದಿ, ಗದಗ**

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ರದ್ದುಗೊಳಿಸುವಂತೆ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ ರಾಜೀನಾಮೆಗೆ ಆಗ್ರಹಿಸಿ ಗದಗ-ಬೆಟಗೇರಿ ಮುಸ್ಲಿಂ ಸಮಾಜದ ವೇದಿಕೆ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಮಹ್ಮದ ಯೂಸುಫ್ ನಮಾಜಿ ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆಯಿಂದ ಅರ್ಹ ಮತದಾರರು ತಮ್ಮ ಸಂವಿಧಾನಬದ್ಧ ಮತದಾನದ ಹಕ್ಕು ಕಳೆದುಕೊಳ್ಳುವ ಆತಂಕವಿದೆ. ಈ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ತನಿಖೆ ನಡೆಸಿ, ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮುಸ್ಲಿಂ ಸಮಾಜದ ಮುಖಂಡರು ಹಾಗೂ ನೂರಾರು ಜನರು ಭಾಗವಹಿಸಿದ್ದರು.

## ಹೆಜ್ಜೆ ಹೆಜ್ಜೆಗೂ ದುರ್ಗಾದೇವಿಯ ಸ್ಮರಣೆ



**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ನವರಾತ್ರಿಯ ಭಕ್ತಿಯ ಅಲೆಯಲ್ಲಿ ಲಕ್ಷ್ಮೇಶ್ವರದಲ್ಲಿ ದುರ್ಗಾದೌಡ್ ಸಂಭ್ರಮ ಮನೆಮಾಡಿದೆ. ದಸರಾ ಉತ್ಸವ ಸಮಿತಿಯಿಂದ ಐದನೇ ವರ್ಷ ಆಯೋಜಿಸಿರುವ ದುರ್ಗಾದೌಡ್, ದೇವಿ ಆರಾಧನೆಯ ಜತೆಗೆ ಯುವಜನರಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಹಾಗೂ ನಾಡಿನ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ ವೇದಿಕೆಯಾಗಿ ಗಮನ ಸೆಳೆಯುತ್ತಿದೆ.

ಗುರುವಾರ ಬಸ್ತಿಬಣ ವ್ಯಾಗೇರಿ ಓಣಿಯ ದುರ್ಗಾದೇವಿ ದೇವಸ್ಥಾನದಿಂದ ಆರಂಭವಾದ ದುರ್ಗಾದೌಡ್ ಮೆರವಣಿಗೆ ಅಗ್ನಿಸೋಮೇಶ್ವರ, ಮೂಕಬಸವೇಶ್ವರ, ಶನೇಶ್ವರ, ಅಯ್ಯಪ್ಪಸ್ವಾಮಿ, ಮಾರುತಿ, ಕೌಲಪೇಟೆಯ ಗಣಪತಿ, ಸಿದ್ಧಿಪ್ರದಾಯಿನಿ ದೇವಸ್ಥಾನ ಹಾಗೂ ಶಂಖಬಸದಿ ಮೂಲಕ ಸಾಗುತ್ತ ಬಸ್ತಿಬಣದ ಬನಶಂಕರಿ ದೇವಸ್ಥಾನ ತಲುಪಿತು. ಮೆರವಣಿಗೆ ಸಾಗುವ ಮಾರ್ಗದಲ್ಲಿ ಮಹಿಳೆಯರು ಬಣ್ಣಬಣ್ಣದ ರಂಗೋಲಿ ಬಿಡಿಸಿ ಭಕ್ತಿಭಾವದಿಂದ ಸ್ವಾಗತಿಸಿದರು.

ನವರಾತ್ರಿಯಲ್ಲಿ ಶಕ್ತಿಸ್ವರೂಪಿಣಿ ದುರ್ಗಾದೇವಿಯ ಆರಾಧನೆಗೆ ವಿಶೇಷ ಮಹತ್ವವಿದೆ. ದುರ್ಗಾದೌಡ್‌ನಂತಹ ಧಾರ್ಮಿಕ ಕಾರ್ಯಕ್ರಮಗಳು ಭಕ್ತರಲ್ಲಿ ಆಧ್ಯಾತ್ಮಿಕ ಚಿಂತನೆ ಬೆಳೆಸುವುದರ ಜತೆಗೆ ಯುವಜನರನ್ನು ಧಾರ್ಮಿಕ ಪರಂಪರೆಯೊಂದಿಗೆ ಬೆಸೆಯುತ್ತವೆ. ಸಾಮೂಹಿಕ ಭಾಗವಹಿಸುವಿಕೆ, ಶಿಸ್ತು ಮತ್ತು ಸಂಘಟನಾ ಮನೋಭಾವಕ್ಕೆ ಪ್ರೇರಣೆ ನೀಡುವ ಇಂತಹ ಮೆರವಣಿಗೆಗಳು ವಿವಿಧ ಬಡಾವಣೆಗಳ ಜನರನ್ನು ಒಂದೇ ಭಕ್ತಿಭಾವದಡಿ ಒಗ್ಗೂಡಿಸುತ್ತವೆ.

ಬಜಾರ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಬಸವೇಶ ಮಹಾಂತಶೆಟ್ಟರ ಮಾತನಾಡಿ, ದಸರಾ ಹಿಂದೂಗಳ ಪ್ರಮುಖ ಹಬ್ಬವಾಗಿದ್ದು, ನಾಡಿನ ಪರಂಪರೆ, ಆಚರಣೆ ಹಾಗೂ ಸಂಸ್ಕೃತಿಯ ಪ್ರತೀಕವಾಗಿದೆ. ಯುವಜನರು ದುರ್ಗಾದೌಡ್‌ನಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಂಸ್ಕಾರ, ಶಿಸ್ತು ಮತ್ತು ಸಾಮಾಜಿಕ ಹೊಣೆಗಾರಿಕೆ ಬೆಳೆಸಿಕೊಳ್ಳುವ ಮೂಲಕ ಉತ್ತಮ ಪ್ರಜೆಗಳಾಗಬೇಕು ಎಂದರು.

ಬಸಣ್ಣ ಅರಳಿ, ನಾಗರಾಜ ಹಣಗಿ, ಮಲ್ಲಿಕಾರ್ಜುನ ನೀರಾಲೋಟಿ ಹಾಗೂ ರವಿ ಲಿಂಗಶೆಟ್ಟಿ ಮಾತನಾಡಿದರು. ಸೋಮೇಶ್ವರ ಭಕ್ತರ ಸೇವಾ ಸಮಿತಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ತಿಪ್ಪಣ್ಣ ಸಂಶಿ, ಅಶೋಕ ಹೊಂಗಲ, ಶಂಕರ ಬಾಳಿಕಾಯಿ, ಗುಡಗೇರಿ, ಅಶೋಕ ನೀರಾಲೋಟಿ, ಮಲ್ಲೇಶಪ್ಪ ಉಮಚಗಿ, ದೇವಪ್ಪ ಕುಂಬಾರ, ಎಫ್.ಎಚ್. ಮುದಗಲ್ಲ, ಚಂದ್ರು ಧರಣಿ, ಯಲ್ಲಪ್ಪ ಕೋರದಾಳ, ದೇವಪ್ಪ ಗಡೇದ, ಪಾಂಡಪ್ಪ ಹುಬ್ಬಳ್ಳಿ, ಯಲ್ಲಪ್ಪ ಚಕ್ರಸಾಲಿ, ಈಶ್ವರ ಬನ್ನಿಕೊಪ್ಪ, ದೇವಪ್ಪ ಹುಲಮನಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಶಕ್ತಿ ಮತ್ತು ಧೈರ್ಯದ ಪ್ರತೀಕ ಮಾ ಕಾತ್ಯಾಯಿನಿ ಆರಾಧನೆಯ ವಿಶೇಷತೆ



## ನವರಾತ್ರಿ ವಿಶೇಷತೆ

### ನವರಾತ್ರಿ ಆರನೇ ದಿನ

ನವರಾತ್ರಿಯ ಆರನೇ ದಿನವನ್ನು ಷಷ್ಠಿ ಎಂದು ಕರೆಯಲಾಗುತ್ತದೆ. ಈ ದಿನ ಮಾ ಕಾತ್ಯಾಯನಿ ದೇವಿಯನ್ನು ಆರಾಧಿಸಲಾಗುತ್ತದೆ. ನವದುರ್ಗೆಯ ಆರನೆಯ ರೂಪವಾದ ಕಾತ್ಯಾಯನಿ ದೇವಿಯು ಶಕ್ತಿ, ಧೈರ್ಯ, ನ್ಯಾಯ ಮತ್ತು ವಿಜಯದ ಪ್ರತೀಕವಾಗಿ ಭಕ್ತರಿಂದ ಪೂಜಿಸಲ್ಪಡುತ್ತಾಳೆ.

**ಕಾತ್ಯಾಯನಿ ದೇವಿಯ ಸ್ವರೂಪ**

ಕಾತ್ಯಾಯನಿ ದೇವಿಯು ಸಾಮಾನ್ಯವಾಗಿ ನಾಲ್ಕು ಕೈಗಳನ್ನು ಹೊಂದಿರುವ ದೇವಿಯಾಗಿ ಚಿತ್ರಿಸಲ್ಪಡುತ್ತಾಳೆ. ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಕಮಲ ಹಾಗೂ ಉಳಿದ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿರುತ್ತವೆ. ಕೆಲವು ಚಿತ್ರಣಗಳಲ್ಲಿ ಸಿಂಹದ ಮೇಲೆ ಆರೂಢಳಾಗಿರುವ ರೂಪದಲ್ಲಿಯೂ ಕಾಣಿಸಿಕೊಳ್ಳುತ್ತಾಳೆ.

ವಾಹನ: ಸಿಂಹ
ರೂಪ: ನವದುರ್ಗೆಯ ಆರನೇ ರೂಪ
ತಿಥಿ: ನವರಾತ್ರಿಯ ಆರನೇ ದಿನ - ಷಷ್ಠಿ
ಪ್ರಮುಖ ಗುಣ: ಧೈರ್ಯ, ಶಕ್ತಿ, ವಿಜಯ ಮತ್ತು ನ್ಯಾಯ

**ಕಾತ್ಯಾಯನಿ ಎಂಬ ಹೆಸರು ಬಂದದ್ದು ಹೇಗೆ?**

ಪುರಾಣಗಳ ಪ್ರಕಾರ, ಮಹಿಷಾಸುರನ ಸಂಹಾರಕ್ಕಾಗಿ ದೇವತೆಗಳ ಶಕ್ತಿಗಳು ಒಂದಾಗಿ ಮಹಾಶಕ್ತಿಯ ರೂಪವನ್ನು ಪಡೆದವು. ಮಹರ್ಷಿ ಕಾತ್ಯಾಯನರ ಆಶ್ರಮದಲ್ಲಿ ದೇವಿಯು ಅವತರಿಸಿದ ಕಾರಣ ಆಕೆಗೆ ಕಾತ್ಯಾಯನಿ ಎಂಬ ಹೆಸರು ಬಂದಿತು ಎಂಬ ನಂಬಿಕೆ ಇದೆ.

ಮಹಿಷಾಸುರನ ವಿರುದ್ಧ ಯುದ್ಧ ಮಾಡಿ ಆತನನ್ನು ಸಂಹರಿಸಿದ ದೇವಿಯ ರೂಪಗಳಲ್ಲಿ ಕಾತ್ಯಾಯನಿ ಪ್ರಮುಖಳಾಗಿದ್ದಾಳೆ. ಹೀಗಾಗಿ ಆಕೆಯನ್ನು ಅಧರ್ಮದ ವಿರುದ್ಧ ಧರ್ಮದ ವಿಜಯದ ಸಂಕೇತವಾಗಿ ಪೂಜಿಸಲಾಗುತ್ತದೆ.



**ಕಾತ್ಯಾಯನಿ ದೇವಿಯ ಆರಾಧನೆಯ ಮಹತ್ವ**

ಭಕ್ತರ ನಂಬಿಕೆಯ ಪ್ರಕಾರ, ಆರನೇ ದಿನ ಕಾತ್ಯಾಯನಿ ದೇವಿಯನ್ನು ಭಕ್ತಿಯಿಂದ ಪೂಜಿಸುವುದರಿಂದ:

1. ಧೈರ್ಯ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ.
2. ನಕಾರಾತ್ಮಕ ಶಕ್ತಿಗಳಿಂದ ರಕ್ಷಣೆ ದೊರೆಯುತ್ತದೆ.
3. ಅಡೆತಡೆಗಳು ದೂರವಾಗುತ್ತವೆ.
4. ಜೀವನದಲ್ಲಿ ಯಶಸ್ಸು ಮತ್ತು ವಿಜಯ ಲಭಿಸುತ್ತದೆ.
5. ಕುಟುಂಬದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಸುತ್ತದೆ.

ವಿಶೇಷವಾಗಿ ವಿವಾಹವಾಗದ ಯುವತಿಯರು ಉತ್ತಮ ಜೀವನ ಸಂಗಾತಿ ದೊರೆಯಲೆಂದು ಕಾತ್ಯಾಯನಿ ದೇವಿಯನ್ನು ಪ್ರಾರ್ಥಿಸುವ ಸಂಪ್ರದಾಯವೂ ಇದೆ. ಶ್ರೀಮದ್ಭಾಗವತದಲ್ಲಿ ವೃಂದಾವನದ ಗೋಪಿಕೆಯರು ಕೃಷ್ಣನನ್ನು ಪತಿಯಾಗಿ ಪಡೆಯಲು ಕಾತ್ಯಾಯನಿ ದೇವಿಯನ್ನು ಆರಾಧಿಸಿದ ಪ್ರಸಂಗ ಪ್ರಸಿದ್ಧವಾಗಿದೆ.

**ಪೂಜಾ ವಿಧಾನ**

ಬೆಳಗ್ಗೆ ಶುಚಿಯಾಗಿ ಸ್ನಾನ ಮಾಡಿ ದೇವಿಯ ಪ್ರತಿಷ್ಠಾಪನೆ ಅಥವಾ ಚಿತ್ರಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಗಣಪತಿ ಪೂಜೆಯ ನಂತರ ಕಾತ್ಯಾಯನಿ ದೇವಿಗೆ ಕುಂಕುಮ, ಅರಿಶಿನ, ಹೂವು, ಅಕ್ಷತೆ, ನೈವೇದ್ಯ ಅರ್ಪಿಸಿ, ದೀಪ ಬೆಳಗಿಸಲಾಗುತ್ತದೆ.

ಕಾತ್ಯಾಯನಿ ದೇವಿಯ ಮಂತ್ರವನ್ನು ಜಪಿಸುವ ಸಂಪ್ರದಾಯವೂ ಇದೆ:

"ಓಂ ದೇವಿ ಕಾತ್ಯಾಯನ್ಯೈ ನಮಃ"

ಭಕ್ತರು ತಮ್ಮ ಕುಟುಂಬದ ಒಳಿತಿಗಾಗಿ, ಆರೋಗ್ಯ, ಶಾಂತಿ, ಸಮೃದ್ಧಿ ಹಾಗೂ ಜೀವನದ ಅಡೆತಡೆಗಳು ನಿವಾರಣೆಯಾಗಲೆಂದು ಪ್ರಾರ್ಥಿಸುತ್ತಾರೆ.

**ಷಷ್ಠಿ ದಿನದ ಆಧ್ಯಾತ್ಮಿಕ ಸಂದೇಶ**

ನವರಾತ್ರಿಯ ಆರನೇ ದಿನದ ಸಂದೇಶವೆಂದರೆ ಅನ್ಯಾಯ ಮತ್ತು ಅಧರ್ಮದ ವಿರುದ್ಧ ಧೈರ್ಯದಿಂದ ನಿಲ್ಲುವುದು. ಕಾತ್ಯಾಯನಿ ದೇವಿಯ ಆರಾಧನೆಯ ಮೂಲಕ ಮನುಷ್ಯನು ತನ್ನೊಳಗಿನ ಭಯ, ದುರ್ಬಲತೆ ಮತ್ತು ನಕಾರಾತ್ಮಕತೆಯನ್ನು ಜಯಿಸಿ ಸತ್ಯದ ಮಾರ್ಗದಲ್ಲಿ ಸಾಗಬೇಕು ಎಂಬ ಸಂದೇಶವನ್ನು ಪಡೆಯುತ್ತಾನೆ.

ಒಟ್ಟಿನಲ್ಲಿ, ನವರಾತ್ರಿಯ ಆರನೇ ದಿನ ಕಾತ್ಯಾಯನಿ ದೇವಿಯ ಆರಾಧನೆಯ ಮೂಲಕ ಶಕ್ತಿ, ಧೈರ್ಯ, ವಿಜಯ ಮತ್ತು ಉತ್ತಮ ಜೀವನಕ್ಕಾಗಿ ಪ್ರಾರ್ಥಿಸುವ ಪವಿತ್ರ ದಿನವಾಗಿದೆ.



- ಕಾವ್ಯಾ ಸುನಿಲ್ ಕುಮಾರ್ ಮಠದ
ಹವ್ಯಾಸಿ ಬರಹಗಾರರು

## ಮಾತಾ ಕಾತ್ಯಾಯಿನಿ ಮಹಾತ್ಮೆ ಮತ್ತು ಪೌರಾಣಿಕ ಹಿನ್ನೆಲೆ

ನವರಾತ್ರಿಯ ಒಂಭತ್ತು ದಿನಗಳಲ್ಲಿ ಆರನೆ ಯ ದಿನದಂದು ಆರಾಧಿಸಲ್ಪಡುವ ದೇವತೆ ಮಾತಾ ಕಾತ್ಯಾಯಿನಿ. ನವರಾತ್ರಿಯ ಈ ಪವಿತ್ರ ದಿನದಂದು ಆಕೆಯ ಮಹಾತ್ಮೆ ಮತ್ತು ಪೌರಾಣಿಕ ಹಿನ್ನೆಲೆಯನ್ನು ಸವಿಸ್ತಾರವಾಗಿ ತಿಳಿಯೋಣ.

**ಮಾತಾ ಕಾತ್ಯಾಯಿನಿಯ ಸ್ವರೂಪ**

**ರೂಪ ಮತ್ತು ವೇಷಭೂಷಣ:** ಕಾತ್ಯಾಯಿನಿ ದೇವಿಯು ನಾಲ್ಕು ಕೈಗಳನ್ನು ಹೊಂದಿದ್ದಾಳೆ (ಚತುರ್ಭುಜೆ). ಆಕೆಯ ಮೇಲಿನ ಎಡಗೈಯಲ್ಲಿ ಕತ್ತಿ ಮತ್ತು ಕೆಳಗಿನ ಎಡಗೈಯಲ್ಲಿ ತಾವರೆ ಹೂವಿದ್ದು, ಬಲಗೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಈ ದೇವಿಯು ಭಕ್ತರಿಗೆ ಅಭಯವನ್ನು ನೀಡುತ್ತಾ ಸಿಂಹದ ಮೇಲೆ ಸವಾರಿ ಮಾಡುತ್ತಾಳೆ.

**ಹೆಸರಿನ ಅರ್ಥ:** ಪ್ರಸಿದ್ಧ ಮಹರ್ಷಿ ಕಾತ್ಯಾಯನರು ದೇವಿಯನ್ನು ಮಗಳಾಗಿ ಪಡೆಯಲು ಕಠಿಣ ತಪಸ್ಸನ್ನು ಆಚರಿಸಿದ್ದರು. ಅವರ ಇಷ್ಟದಂತೆ ದೇವಿ ಆದಿಶಕ್ತಿಯು ಅವರ ಮಗಳಾಗಿ ಜನಿಸಿದಳು. ಹೀಗಾಗಿ ಕಾತ್ಯಾಯನ ಮಹರ್ಷಿಗಳ ಕುಲದಲ್ಲಿ ಜನಿಸಿದ್ದರಿಂದ ಈ ದೇವಿಗೆ 'ಕಾತ್ಯಾಯಿನಿ' ಎಂಬ ಹೆಸರು ಬಂತು.

**ಪುರಾಣ ಕಥೆ ಹಾಗೂ ಮಹಾತ್ಮೆ**

ಹಿಂದೂ ಪುರಾಣಗಳ ಪ್ರಕಾರ, ಬ್ರಹ್ಮಾಂಡದಲ್ಲಿ ಮಹಿಷಾಸುರ ಎಂಬ ಕ್ರೂರ ರಾಕ್ಷಸನ ಅತಿಯಾದ ದೌರ್ಜನ್ಯ ಮತ್ತು ಅಧರ್ಮವು ಮಿತಿಮೀರಿತ್ತು. ಆತನನ್ನು ವಧಿಸಲು ಸಕಲ ದೇವತೆಗಳು ತಮ್ಮ ತೇಜಸ್ಸನ್ನು ಒಟ್ಟುಗೂಡಿಸಿ ಒಂದು ದಿವ್ಯ ಶಕ್ತಿಯನ್ನು ಸೃಷ್ಟಿಸಿದರು.

**ಮಹಿಷಾಸುರ ಮರ್ಧಿನಿ:** ಮಹರ್ಷಿ ಕಾತ್ಯಾಯನರು ಮೊದಲು ಈ ದೇವಿಯನ್ನು ಪೂಜಿಸಿ ಆರಾಧನೆ ಮಾಡಿದ್ದರಿಂದ, ದೇವಿ ಕಾತ್ಯಾಯನಿಯು ಮಹಿಷಾಸುರನ ಸಂಹಾರಕ್ಕಾಗಿ ಪ್ರತ್ಯಕ್ಷಳಾದಳು. ಆಕೆಯು ಅತ್ಯಂತ ಉಗ್ರವಾದ ಯುದ್ಧದಲ್ಲಿ ಮಹಿಷಾಸುರನನ್ನು ಸಂಹಾರ ಮಾಡಿ, ದೇವತೆಗಳನ್ನು ಮತ್ತು ಲೋಕವನ್ನು ಆತನ ಕಾಟದಿಂದ ಮುಕ್ತಿಗೊಳಿಸಿದಳು.

ನವರಾತ್ರಿಯ ಆರನೇ ದಿನದ ಸಂದೇಶವೆಂದರೆ ಅನ್ಯಾಯ ಮತ್ತು ಅಧರ್ಮದ ವಿರುದ್ಧ ಧೈರ್ಯದಿಂದ ನಿಲ್ಲುವುದು. ಕಾತ್ಯಾಯನಿ ದೇವಿಯ ಆರಾಧನೆಯ ಮೂಲಕ ಮನುಷ್ಯನು ತನ್ನೊಳಗಿನ ಭಯ, ದುರ್ಬಲತೆ ಮತ್ತು ನಕಾರಾತ್ಮಕತೆಯನ್ನು ಜಯಿಸಿ ಸತ್ಯದ ಮಾರ್ಗದಲ್ಲಿ ಸಾಗಬೇಕು ಎಂಬ ಸಂದೇಶವನ್ನು ಪಡೆಯುತ್ತಾನೆ.

ಒಟ್ಟಿನಲ್ಲಿ, ನವರಾತ್ರಿಯ ಆರನೇ ದಿನ ಕಾತ್ಯಾಯನಿ ದೇವಿಯ ಆರಾಧನೆಯ ಮೂಲಕ ಶಕ್ತಿ, ಧೈರ್ಯ, ವಿಜಯ ಮತ್ತು ಉತ್ತಮ ಜೀವನಕ್ಕಾಗಿ ಪ್ರಾರ್ಥಿಸುವ ಪವಿತ್ರ ದಿನವಾಗಿದೆ.

**ವಿವಾಹ ವ್ರತದ ದೇವಿ:** ದೇವಿಯ ಈ ರೂಪವನ್ನು ಹಿಂದೂ ಧರ್ಮದಲ್ಲಿ ಪ್ರೀತಿ ಮತ್ತು ವಿವಾಹದ ದೇವತೆಯಾಗಿಯೂ ಪೂಜಿಸಲಾಗುತ್ತದೆ. ವಿಶೇಷವಾಗಿ ಗೋಪಿಯರು ಶ್ರೀಕೃಷ್ಣನನ್ನು ಪತಿಯಾಗಿ ಪಡೆಯಲು ಯಮುನಾ ನದಿ ತೀರದಲ್ಲಿ ಕಾತ್ಯಾಯಿನಿ ದೇವಿಯನ್ನು ಪೂಜಿಸಿ ವ್ರತ ಆಚರಿಸಿದ್ದರು ಎಂಬ ಐತಿಹ್ಯವಿದೆ. ಮದುರೆಯಲ್ಲಿರುವ ಅಡಚಣೆಗಳು ನಿವಾರಣೆಯಾಗಲು ಯುವತಿಯರು ಈ ದೇವಿಯನ್ನು ವಿಶೇಷವಾಗಿ ಪೂಜಿಸುತ್ತಾರೆ.

**ಕಾತ್ಯಾಯಿನಿ ಪೂಜೆಯ ಮಹತ್ವ ಮತ್ತು ಫಲ**



**ಆಜ್ಞಾ ಚಕ್ರದ ಅಧಿಪತಿ:** ಆಧ್ಯಾತ್ಮಿಕ ಹಿನ್ನೆಲೆಯಲ್ಲಿ, ಕಾತ್ಯಾಯಿನಿ ದೇವಿಯು ಮನುಷ್ಯನ ಶರೀರದಲ್ಲಿರುವ 'ಆಜ್ಞಾ ಚಕ್ರ'ದ (ಹುಬ್ಬುಗಳ ಮಧ್ಯದ ಚಕ್ರ) ಅಧಿಪತಿಯಾಗಿದ್ದಾಳೆ. ಈ ದೇವಿಯ ಉಪಾಸನೆಯಿಂದ ಮನಸ್ಸಿನ ಏಕಾಗ್ರತೆ, ಇಚ್ಛಾಶಕ್ತಿ ಹಾಗೂ ಆಧ್ಯಾತ್ಮಿಕ ಜ್ಞಾನ ವೃದ್ಧಿಸುತ್ತದೆ.

**ಶಕ್ತಿ ಮತ್ತು ಧೈರ್ಯ:** ಭಕ್ತರ ಜೀವನದಲ್ಲಿ ಎದುರಾಗುವ ಶತ್ರುಗಳನ್ನು, ಭಯವನ್ನು ಮತ್ತು ಅಡಚಣೆಗಳನ್ನು ಹೊಡೆದೋಡಿಸಲು ಈ ತಾಯಿಯ ಕೃಪೆ ಅತ್ಯಂತ ಅಗತ್ಯ. ಈ ದೇವಿಯನ್ನು ಪೂಜಿಸುವುದ-ರಿಂದ ದೈಹಿಕ ಹಾಗೂ ಮಾನಸಿಕ ಶಕ್ತಿ ಲಭಿಸುತ್ತದೆ.

**ಪ್ರಾರ್ಥನಾ ಮಂತ್ರ:**

**ಯಾ ದೇವಿ ಸರ್ವಭೂತೇಷು ಮಾತಾ ಕಾತ್ಯಾಯಿನಿ ರೂಪೇಣ ಸಂಸ್ಥಿತಾ ।**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥**

ನವರಾತ್ರಿಯ ಈ ಆರನೆಯ ದಿನದಂದು ಭಕ್ತಿಯಿಂದ ಮಾತಾ ಕಾತ್ಯಾಯಿನಿಯನ್ನು ಸ್ಮರಿಸುವುದರಿಂದ ಜೀವನದಲ್ಲಿ ಧೈರ್ಯ, ವಿಜಯ ಮತ್ತು ಶುಭ ಫಲಗಳು ಪ್ರಾಪ್ತಿಯಾಗುತ್ತವೆ.



- ವಿದ್ವಾನ್ ಪ್ರವೀಣ್ ಗುರೂಜಿ.
9964548405



ಗದುಗಿನ ನಗರೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ಆರ್ಯವೈಶ್ಯ ಕುಲದೇವತೆ ಕನ್ಯಕಾಪರಮೇಶ್ವರಿ ದೇವಿಗೆ ಗುರುವಾರ ಪದ್ಮಾವತಿ ದೇವಿ ಅಲಂಕಾರ ಭಕ್ತಾಧಿಗಳ ಗಮನ ಸೆಳೆಯಿತು.



ಕೊಪ್ಪಳದ ಶ್ರೀ ವಾಸವಿ ಕನ್ಯಕಾಪರಮೇಶ್ವರಿ ದೇವಿಗೆ ದಸರಾ ಮಹೋತ್ಸವದ ಪ್ರಯುಕ್ತ 5ನೇ ದಿವಸ ಶ್ರೀ ರಾಜರಾಜೇಶ್ವರಿ ಅಲಂಕಾರ ಮಾಡಿರುವುದು



ಗುರುವಾರ ಮುಂಜಾನೆ ದಿನಾಂಕ:15/10/2026, ರಂದು ಸವದತ್ತಿ ಶ್ರೀಕ್ಷೇತ್ರ ಯಲ್ಲಮ್ಮನಗುಡ್ಡದ ಜಗನ್ಮಾತೆ ಶ್ರೀ ರೇಣುಕಾ ಯಲ್ಲಮ್ಮಾ ಅಮ್ಮನವರ ಪೂಜಾ ಅಲಂಕಾರ ಉದೋ ಉದೋ ಯಲ್ಲಮ್ಮ.



ನವರಾತ್ರಿಯ ಪ್ರಯುಕ್ತ ಐದನೇ ದಿನದ ಹುಲಿಗಿಯ ಜಗನ್ಮಾತೆ ಶ್ರೀ ಹುಲಿಗೆಮ್ಮ ದೇವಿಯ ಇಂದಿನ (15-10-2026) ವಿಶೇಷ ಪೂಜಾ ಅಲಂಕಾರ

## ಎಂಟು ದಿನ ಗಡುವು, ಇಲ್ಲದಿದ್ದರೆ ಹೆದ್ದಾರಿ ಬಂದ್!

# ಮೆಣಸಿನಕಾಯಿ ಬೆಳೆವಿಮೆ ಬಾಕಿಗೆ ರೈತರ ಆಕ್ರೋಶ

**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

2025–26ನೇ ಸಾಲಿನ ಮೆಣಸಿನಕಾಯಿ ಬೆಳೆವಿಮೆ ಹಣವನ್ನು ಎಂಟು ದಿನಗಳೊಳಗೆ ರೈತರ ಖಾತೆಗಳಿಗೆ ಜಮೆ ಮಾಡದಿದ್ದರೆ ಶಿಗ್ಲಿ ಕ್ರಾಸ್‌ನಲ್ಲಿ ಎತ್ತು–ಚಕ್ಕಡಿಗಳೊಂದಿಗೆ ರಾಜ್ಯ ಹೆದ್ದಾರಿ ಬಂದ್ ಮಾಡಿ ಹೋರಾಟ ನಡೆಸಲಾಗುವುದು ಎಂದು ಕೃಷಿಕ ಸಮಾಜದ ಲಕ್ಷ್ಮೇಶ್ವರ ತಾಲೂಕು ಅಧ್ಯಕ್ಷ ಚನ್ನಪ್ಪ ಷಣ್ಮುಖಿ ಎಚ್ಚರಿಕೆ ನೀಡಿದರು.



ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಗುರುವಾರ ಗ್ರೇಡ್–2 ತಹಸೀಲ್ದಾರ್ ಮಂಜುನಾಥ ಅಮಾಸಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಬೆಳೆವಿಮೆ ಕ್ಲೇಮ್ ಆಗಿ ನಾಲ್ಕೈದು ತಿಂಗಳು ಕಳೆದರೂ ರೈತರ ಖಾತೆಗಳಿಗೆ ಹಣ ಜಮೆಯಾಗಿಲ್ಲ. ಮೆಣಸಿನಕಾಯಿ ಬೆಳೆ ಸಂಪೂರ್ಣ ನಾಶವಾಗಿ ಸಂಕಷ್ಟದಲ್ಲಿರುವ ರೈತರಿಗೆ ಕೂಡಲೇ ವಿಮಾ ಮೊತ್ತ ಪಾವತಿಸಬೇಕು ಎಂದು ಆಗ್ರಹಿಸಿದರು.

2026–27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಹಾನಿಯಾಗಿದ್ದು, ವಿಮೆ ಕಟ್ಟಿದ ರೈತರಿಗೆ ಮಧ್ಯಂತರ ಬೆಳೆವಿಮೆ ಪರಿಹಾರ ನೀಡಬೇಕು. ಬರಪೀಡಿತ ಪ್ರದೇಶಗಳೆಂದು ಘೋಷಿಸುವುದಷ್ಟೇ ಸಾಲದು. ಬೆಳೆಹಾನಿ ಪರಿಹಾರ, ಸಾಲದ ಬಡ್ಡಿ ಮನ್ನಾ, ಜಾನುವಾರುಗಳಿಗೆ ಮೇವು, ಕುಡಿಯುವ ನೀರು ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹೆಸರು ಖರೀದಿಸುವುದಾಗಿ ಘೋಷಿಸಿದ್ದರೂ ನೋಂದಣಿ ಹಾಗೂ ಖರೀದಿ ಕೇಂದ್ರಗಳು ಆರಂಭವಾಗಿಲ್ಲ. ಕೂಡಲೇ ಖರೀದಿ ಕೇಂದ್ರಗಳನ್ನು ಆರಂಭಿಸುವುದರ ಜತೆಗೆ ಜಾನುವಾರುಗಳಿಗೆ ಮೇವು ಬ್ಯಾಂಕ್ ತೆರೆಯಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಹನುಮಂತಪ್ಪ ಚಿಂಚಲಿ ಮಾತನಾಡಿ, ಬರಗಾಲ ಆವರಿಸಿ ಮೂರು ತಿಂಗಳು ಕಳೆದರೂ ಸರ್ಕಾರಗಳು ಪರಿಹಾರ ನೀಡಿಲ್ಲ. ಬೆಳೆಹಾನಿ ಹಾಗೂ ಮಧ್ಯಂತರ ಪರಿಹಾರ ಬಿಡುಗಡೆ ಮಾಡಿ, ಬೆಳೆವಿಮೆ ಪಾವತಿ ಮತ್ತು ಬರ ಪರಿಹಾರ ಕಾಮಗಾರಿಗಳನ್ನು ತಕ್ಷಣ ಆರಂಭಿಸಬೇಕು. ಇಲ್ಲವಾದರೆ ಹೋರಾಟ ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು.

> ಎಂಟು ದಿನಗಳಲ್ಲಿ ಬೆಳೆವಿಮೆ ಹಣ ಜಮೆಯಾಗದಿದ್ದರೆ ಶಿಗ್ಲಿ ಕ್ರಾಸ್‌ನಲ್ಲಿ ಎತ್ತು-ಚಕ್ಕಡಿಗಳೊಂದಿಗೆ ರಾಜ್ಯ ಹೆದ್ದಾರಿ ಬಂದ್ ಮಾಡಿ ಹೋರಾಟ ನಡೆಸುತ್ತೇವೆ.
>
> – ಚನ್ನಪ್ಪ ಷಣ್ಮುಖಿ, ಅಧ್ಯಕ್ಷರು

ಈ ಸಂದರ್ಭದಲ್ಲಿ ರೈತ ಮುಖಂಡರಾದ ಟಾಕಪ್ಪ ಸಾತಪುತೆ, ನಿಂಬಣ್ಣ ಮಡಿವಾಳರ, ಎಸ್.ಎಸ್. ರಾಯನಗೌಡ್ರ, ದ್ಯಾಮನಗೌಡ ಡೋಣಿ, ಪರಮೇಶ್ವರಗೌಡ ಪಾಟೀಲ, ಬಸವರಾಜ ಟೊಕಾಳಿ, ಫಕ್ಕಿರಗೌಡ ಸಂಕನಗೌಡ್ರ, ಮಂಜುನಾಥ ಸುಮವಾರದ, ಷಣ್ಮುಖಗೌಡ ಪಾಟೀಲ, ಮಂಜುನಾಥಗೌಡ ಕರಿಗೌಡ್ರ, ಚನ್ನಪ್ಪ ಮಟ್ಟಿ, ಹನುಮಂತಗೌಡ ಮೂಲಿಮನಿ, ಮಂಜುನಾಥಗೌಡ ಹರ್ತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಹಾಲುಮತ ಮಹಾಸಭಾದಿಂದ ವಾಸಣ್ಣ ಕುರಡಗಿ ಅವರಿಗೆ ಸನ್ಮಾನ



**ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡ ವಾಸಣ್ಣ ಕುರಡಗಿ ಅವರನ್ನು ಹಾಲುಮತ ಮಹಾಸಭಾ ವತಿಯಿಂದ ಅವರ ನಿವಾಸದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಹಾಲುಮತ ಮಹಾಸಭಾದ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ, ಜಿಲ್ಲಾ ಗೌರವಾಧ್ಯಕ್ಷ ನಾಗರಾಜ ಮೆಣಸಗಿ, ಉಪಾಧ್ಯಕ್ಷ ಸೋಮನಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ಮುತ್ತು ಜಡಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ಯುವ ಘಟಕದ ರಾಜ್ಯ ಪದಾಧಿಕಾರಿಗಳಾದ ಹೇಮಂತ ಗಿಡ್ಡಹನುಮಣ್ಣವರ ಹಾಗೂ ಮಂಜುನಾಥ ಜಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ನವರಾತ್ರಿ



ಮೈಸೂರು ದಸರಾ
ಎಷ್ಟೊಂದು ಸುಂದರ!
ನವರಾತ್ರಿ ಉತ್ಸವ
ಹಬ್ಬದ ಸಡಗರ!

ಎಲ್ಲೆಲ್ಲೂ ಸಂಭ್ರಮ,
ನವ ಅವತಾರಗಳ ವೈಭವ,
ಭಕ್ತಿಯ ಭಾವದಲಿ
ತುಂಬಿದೆ ಹಬ್ಬದ ಉತ್ಸವ!

ಶೈಲಪುತ್ರಿ ದುರ್ಗೆ,
ಬ್ರಹ್ಮಚಾರಿಣಿ ದುರ್ಗೆ,
ಚಂದ್ರಘಂಟಾ ದುರ್ಗೆ,
ಕೂಷ್ಮಾಂಡ ದೇವಿ ದುರ್ಗೆ!

ಸ್ಕಂದಮಾತಾ ದುರ್ಗೆ,
ಕಾತ್ಯಾಯಿನಿ ದುರ್ಗೆ,
ಕಾಳರಾತ್ರಿ ಮಹಾಮಾಯೆ,
ಮಹಾಗೌರಿ ತಾಯಿ!

ಸಿದ್ಧಿಧಾತ್ರಿ ತಾಯಿ,
ದೇವಿಯ ನವ ಅವತಾರಗಳು,
ನವರಾತ್ರಿಯ ಒಂಬತ್ತು ದಿನಗಳು,
ಭಕ್ತಿಯ ಬೆಳಕಿನ ಹಬ್ಬಗಳು!

ಆಯುಧ ಪೂಜೆಯ ಸಂಭ್ರಮ,
ವಿಜಯದಶಮಿಯ ವೈಭವ,
ನಾಡಿನೆಲ್ಲೆಡೆ ನೆಲೆಸಲಿ
ಶಾಂತಿ, ಸುಖ, ಸಮೃದ್ಧಿಯ ಸೌಭಾಗ್ಯ!

**ವಿಜಯದಶಮಿ ಹಬ್ಬದ ಹಾರ್ದಿಕ ಶುಭಾಶಯಗಳು**

– ವಿ.ಎಂ.ಎಸ್. ಗೋಪಿ
ಲೇಖಕರು ಹಾಗೂ ಸಾಹಿತಿಗಳು
ಬೆಂಗಳೂರು.

## ರಾಷ್ಟ್ರದ ಅಭಿವೃದ್ಧಿಯಲ್ಲಿ ಗ್ರಾಮೀಣ ಯುವಕರ ಪಾತ್ರ ಮಹತ್ವದ್ದು



**ವಿಜಯಸಾಕ್ಷಿ ಸುದ್ದಿ, ಗದಗ**

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾವಂತರಾಗುವುದರ ಜೊತೆಗೆ ಪ್ರಜ್ಞಾವಂತ ನಾಗರಿಕರಾಗಿ ರೂಪುಗೊಳ್ಳಬೇಕು ಎಂದು ಕನ್ನಡ ಉಪನ್ಯಾಸಕ ಶಾಂತಕುಮಾರ ಮಲ್ಲಾಪೂರ ಹೇಳಿದರು.

ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಚಿಕ್ಕೇನಕೊಪ್ಪದ ಶ್ರೀ ಚನ್ನವೀರ ಶರಣರ ಪದವಿಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಬಹಳ ಮುಖ್ಯವಾಗಿದೆ. ಗ್ರಾಮಗಳು ಪ್ರಗತಿ ಸಾಧಿಸಬೇಕಾದರೆ ಶುದ್ಧ ಕುಡಿಯುವ ನೀರು, ಸುಸಜ್ಜಿತ ರಸ್ತೆಗಳು, ಮಹಿಳಾ ಶಿಕ್ಷಣಕ್ಕೆ ಆದ್ಯತೆ ಹಾಗೂ ಮೂಢನಂಬಿಕೆಗಳ ನಿರ್ಮೂಲನೆಗೆ ಒತ್ತು ನೀಡಬೇಕು. ವಿದ್ಯಾರ್ಥಿಗಳು ಸೇವಾ ಮನೋಭಾವ, ಆತ್ಮವಿಶ್ವಾಸ ಮತ್ತು ಓದುವ ಹವ್ಯಾಸ ಬೆಳೆಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ಹನುಮಪ್ಪ ಗಾಣಿಗೇರ, ರೇಣವ್ವ ಅಗಸಿಮನಿ, ಕಾಲೇಜಿನ ಪ್ರಾಚಾರ್ಯ ಎಸ್.ಬಿ. ಹಿರೇಮಠ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಜಿ.ಎಸ್. ವೀರಘಂಟಿ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಕುಮಾರಿ ಲಕ್ಷ್ಮೀ ನುಚ್ಚಂಬಲಿ ಕಾರ್ಯಕ್ರಮ ನಿರೂಪಿಸಿದರು. ಗೀತಾ ರೋಣದ ಸ್ವಾಗತಿಸಿದರು. ಸಿಂಧು ಆಡೂರು ವಂದಿಸಿದರು.

## ಮುಖ್ಯಗುರುಗಳಾಗಿ ಮೈನಳ್ಳಿ ಮಂಜುನಾಥ ಅಧಿಕಾರ ಸ್ವೀಕಾರ



**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಪಟ್ಟಣದ ರಾಮನಗರದಲ್ಲಿ ರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಹಿರಿಯ ಬಡ್ತಿ ಮುಖ್ಯಗುರುಗಳಾಗಿ ಮೈನಳ್ಳಿ ಮಂಜುನಾಥ ಅವರು ಅಧಿಕಾರ ಸ್ವೀಕರಿಸಿದರು.

ಶಾಲೆಯ ಶೈಕ್ಷಣಿಕ ಪ್ರಗತಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡುವ ನಿರೀಕ್ಷೆಯೊಂದಿಗೆ ನೂತನ ಮುಖ್ಯಗುರುಗಳ ನೇಮಕ ಮಹತ್ವ ಪಡೆದಿದೆ. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್‌ಡಿಎಂಸಿ) ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಮೈನಳ್ಳಿ ಮಂಜುನಾಥ ಅವರಿಗೆ ಅಭಿನಂದನೆ ಸಲ್ಲಿಸಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲಾ ಮಾನವ ಹಕ್ಕುಗಳ ಅಧ್ಯಕ್ಷ ಕೆ. ಶ್ಯಾಬುದ್ದೀನ್, ಶಾಲೆಯ ಸಹಶಿಕ್ಷಕರಾದ ಮುರುಘರಾಜ ಸೊನ್ನದ, ಕೆ. ರಾಮಪ್ಪ, ದೈಹಿಕ ಶಿಕ್ಷಣ ಶಿಕ್ಷಕ ಮೂಗಣ್ಣ, ತಾಲೂಕು ಮುಖ್ಯೋಪಾಧ್ಯಾಯರ ಸಂಘದ ಪದಾಧಿಕಾರಿಗಳು, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿ ಶಾಲೆಯ ಕೀರ್ತಿ ಹೆಚ್ಚಿಸುವುದರ ಜತೆಗೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿ ಎಂದು ಗಣ್ಯರು ನೂತನ ಮುಖ್ಯಗುರುಗಳಿಗೆ ಶುಭ ಹಾರೈಸಿದರು.

## ರಾಷ್ಟ್ರೀಯ ಕೈಗಾರಿಕಾ ಸಮಾವೇಶದಲ್ಲಿ ಗದಗ ಚೇಂಬರ್ ಪ್ರತಿನಿಧಿಗಳ ಭಾಗಿ




**ವಿಜಯಸಾಕ್ಷಿ ಸುದ್ದಿ, ಗದಗ**

ನವದೆಹಲಿಯ ಭಾರತ್ ಮಂಟಪದ ಲೀಡರ್ಸ್ ಲೌಂಜ್‌ನಲ್ಲಿ ಅಕ್ಟೋಬರ್ 12ರಂದು ಸ್ಮಾಲ್ ಇಂ–ಡಸ್ಟ್ರೀಸ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ (ಸಿಡ್ಬಿ) ಆಯೋಜಿಸಿದ್ದ ಕೈಗಾರಿಕಾ ಸಂಘಟನೆಗಳ ಎರಡನೇ ರಾಷ್ಟ್ರೀಯ ಸಮಾವೇಶದಲ್ಲಿ ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಹಾಗೂ ನಿಕಟಪೂರ್ವ ಕಾರ್ಯದರ್ಶಿ ಚನ್ನವೀರಪ್ಪ ಹುಣಶಿಕಟ್ಟಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ದೇಶದ ವಿವಿಧ ಕೈಗಾರಿಕಾ ಸಂಘಟನೆಗಳು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ಪ್ರತಿನಿಧಿಗಳು, ನೀತಿ ನಿರೂಪಕರು ಹಾಗೂ ಸರ್ಕಾರಿ ಸಂಸ್ಥೆಗಳ ಪ್ರತಿನಿಧಿಗಳನ್ನು ಒಂದೇ ವೇದಿಕೆಗೆ ತಂದು ಉದ್ಯಮ ವಲಯದ ಅಭಿವೃದ್ಧಿ ಕುರಿತು ಚರ್ಚೆ, ಸಹಕಾರ ಮತ್ತು ಜ್ಞಾನ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು ಸಮಾವೇಶದ ಮುಖ್ಯ ಉದ್ದೇಶವಾಗಿತ್ತು.

ಸಮಾವೇಶದಲ್ಲಿ ಕೈಗಾರಿಕಾ ಸಂಘಟನೆಗಳು ಎದುರಿಸುತ್ತಿರುವ ಸಮಸ್ಯೆಗಳು, ಉದ್ಯಮಿಗಳ ಅನುಭವಗಳು ಹಾಗೂ ಎಂಎಸ್‌ಎಂಇ ವಲಯದ ಬೆಳವಣಿಗೆಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಲಾಯಿತು. ಅಲ್ಲದೆ, ಸಂಬಂಧಿತ ಸಚಿವಾಲಯಗಳು, ಇಲಾಖೆಗಳು ಮತ್ತು ನಿಯಂತ್ರಣ ಸಂಸ್ಥೆಗಳೊಂದಿಗೆ ನೀತಿಸಂಬಂಧಿ ವಿಚಾರಗಳ ಕುರಿತು ಸಂವಾದ ನಡೆಸಲು ಹಾಗೂ ಕೈಗಾರಿಕಾ ವಲಯದ ಪ್ರಮುಖರು ಮತ್ತು ವಿವಿಧ ಪಾಲುದಾರರ ನಡುವಿನ ಸಹಯೋಗವನ್ನು ಬಲಪಡಿಸಲು ವೇದಿಕೆ ಕಲ್ಪಿಸಲಾಯಿತು.

ಕೈಗಾರಿಕಾ ವಲಯದ ಪ್ರತಿನಿಧಿಗಳು ಮತ್ತು ಸರ್ಕಾರಿ ಸಂಸ್ಥೆಗಳ ನಡುವಿನ ಸಂವಹನ ಹೆಚ್ಚಿಸುವ ಮೂಲಕ ಉದ್ಯಮಗಳ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸುವ ಆಶಯ ಸಮಾವೇಶದ್ದಾಗಿತ್ತು.

ದೇಶದ 26 ರಾಜ್ಯಗಳ 140 ಕೈಗಾರಿಕಾ ಸಂಘಟನೆಗಳಿಂದ 250ಕ್ಕೂ ಹೆಚ್ಚು ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಈಶಾನ್ಯ ರಾಜ್ಯಗಳ 14 ಸಂಘಟನೆಗಳು ಹಾಗೂ ಮಹಿಳಾ ಉದ್ಯಮಿಗಳ ಏಳು ಸಂಘಟನೆಗಳ ಭಾಗವಹಿಸುವಿಕೆ ವಿಶೇಷ ಗಮನ ಸೆಳೆಯಿತು.

## ದೇಶಸೇವೆಯ ಸಂಕಲ್ಪದೊಂದಿಗೆ ಯುವಕರು ಮುನ್ನಡೆಯಲಿ



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ದೇಶಸೇವೆ ಎಂದರೆ ಕೇವಲ ಗಡಿಯಲ್ಲಿ ನಿಂತು ಕಾವಲು ಕಾಯುವುದಷ್ಟೇ ಅಲ್ಲ, ಸಮಾಜದ ಸಂಕಷ್ಟದ ಸಂದರ್ಭಗಳಲ್ಲಿ ಜನರ ನೆರವಿಗೆ ಧಾವಿಸುವುದೂ ನಿಜವಾದ ದೇಶಸೇವೆಯಾಗಿದೆ. ಸೇವೆ, ಶಿಸ್ತು, ಕರ್ತವ್ಯಪ್ರಜ್ಞೆ ಹಾಗೂ ಮಾನವೀಯ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಯುವಶಕ್ತಿ ಸಮಾಜದ ಪರಿವರ್ತನೆಗೆ ಶಕ್ತಿಯಾಗಬಲ್ಲದು ಎಂದು ಗೃಹರಕ್ಷಕ ದಳದ ಅಧಿಕಾರಿ ಸುರೇಶ ಹಳ್ಳಿಕೇರಿ ಹೇಳಿದರು.

ಪಟ್ಟಣದ ಅನ್ನದಾನೇಶ್ವರ ಪದವಿಪೂರ್ವ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವತಿಯಿಂದ ಮಾರನಬಸರಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಗೃಹರಕ್ಷಕ ದಳದ ಪಾತ್ರ ಮಹತ್ವದ್ದಾಗಿದೆ. ಸಾರ್ವಜನಿಕ ಕಾರ್ಯಕ್ರಮಗಳು, ತುರ್ತು ಪರಿಸ್ಥಿತಿಗಳು ಹಾಗೂ ಸಂಕಷ್ಟದ ಸಂದರ್ಭಗಳಲ್ಲಿ ಗೃಹರಕ್ಷಕ ದಳದ ಸಿಬ್ಬಂದಿ ಸಲ್ಲಿಸುವ ಸೇವೆ ಜನರ ಸುರಕ್ಷತೆಗೆ ಪೂರಕವಾಗಿದೆ. ಸೇವೆಯನ್ನು ಕೇವಲ ಉದ್ಯೋಗವೆಂದು ಪರಿಗಣಿಸದೆ, ಸಮಾಜದ ಹಿತಕ್ಕಾಗಿ ನಿರ್ವಹಿಸುವ ಜವಾಬ್ದಾರಿಯೆಂದು ಅರಿತುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಯುವಜನರು ಜೀವನದಲ್ಲಿ ಶಿಸ್ತು, ಸಮಯಪ್ರಜ್ಞೆ, ಕರ್ತವ್ಯನಿಷ್ಠೆ ಮತ್ತು ಪರಸ್ಪರ ಸಹಕಾರದ ಗುಣಗಳನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿ ಜೀವನದಲ್ಲಿಯೇ ಸೇವಾ ಮನೋಭಾವ ಮೈಗೂಡಿಸಿಕೊಂಡರೆ ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಲು ಸಾಧ್ಯ. ಸಮಾಜಕ್ಕೆ ಅಗತ್ಯವಿರುವ ಸಂದರ್ಭದಲ್ಲಿ ನೆರವಿನ ಹಸ್ತ ಚಾಚುವ ಮನೋಭಾವವೇ ಶಿಕ್ಷಣದ ನಿಜವಾದ ಸಾರ್ಥಕತೆ ಎಂದು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಜ್ಞಾನವನ್ನು ಮೀರಿದ ಬದುಕಿನ ಅನುಭವಗಳನ್ನು ಒದಗಿಸುತ್ತವೆ. ಗ್ರಾಮೀಣ ಜನರೊಂದಿಗೆ ಬೆರೆಯುವುದು, ಅವರ ಸಮಸ್ಯೆಗಳನ್ನು ಅರಿಯುವುದು ಹಾಗೂ ಸಾಮೂಹಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿ, ನಾಯಕತ್ವದ ಗುಣ ಮತ್ತು ಮಾನವೀಯ ಮೌಲ್ಯಗಳು ಬೆಳೆಯುತ್ತವೆ. ಶಿಬಿರದಲ್ಲಿ ದೊರೆಯುವ ಇಂತಹ ಅನುಭವಗಳು ಯುವಜನರ ಭವಿಷ್ಯದ ಬದುಕಿಗೆ ದಾರಿದೀಪವಾಗುತ್ತವೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಗನಬಸಪ್ಪ ಹಾದಿಮನಿ ವಹಿಸಿದ್ದರು. ಶ್ರೀಶೈಲಪ್ಪ ಶಾಂತಗೇರಿಮಠ ಹಾಗೂ ಲಕ್ಷ್ಮಣ ಪೂಜಾರ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಎನ್‌ಎಸ್–ಎಸ್ ಶಿಬಿರಾರ್ಥಿಗಳು ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ನಗರೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಸಂಭ್ರಮ



**ವಿಜಯಸಾಕ್ಷಿ ಸುದ್ದಿ, ಗದಗ**

ಗದುಗಿನ ನಗರೇಶ್ವರ ದೇವಸ್ಥಾನದಲ್ಲಿ ಆರ್ಯವೈಶ್ಯ ಸಮಾಜದ ಶ್ರೀ ನಗರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿ ವತಿಯಿಂದ 51ನೇ ವರ್ಷದ ಶ್ರೀ ಶರನ್ನವರಾತ್ರಿ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ಜರುಗಿದವು.

ಭಕ್ತರಾದ ರಘುರಾಮಚಂದ್ರ ರಾಯಚೂರ, ನಾಗರಾಜ ಪ್ರಹ್ಲಾದಶೆಟ್ಟಿ ರಾಯಚೂರ ಹಾಗೂ ಮೋಹನ ವೆಂಕಪ್ಪ ಬೆಂಗಳೂರು ಅವರ ಕುಟುಂಬದವರು ಕನ್ಯಕಾಪರಮೇಶ್ವರಿ ದೇವಿಗೆ ರಾಜರಾಜೇಶ್ವರಿ ದೇವಿಯ ಅಲಂಕಾರದ ಸೇವೆ ಸಲ್ಲಿಸಿದರು.

ಬೆಳಿಗ್ಗೆ ನಡೆದ ಶ್ರೀ ಲಕ್ಷ್ಮೀ ಸುಹಾಸಿನಿಯರ ಪೂಜಾ ಕಾರ್ಯಕ್ರಮದಲ್ಲಿ ಮೊದಲೇ ಹೆಸರು ನೋಂದಾಯಿಸಿದ್ದ ಸಮಾಜದ 51 ಮುತ್ತೈದೆಯರಿಗೆ ಮುತ್ತೈದೆತನದ ಪೂಜೆ ನೆರವೇ–ರಿಸಲಾಯಿತು. ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿವಿಧಾನಗಳೊಂದಿಗೆ ನಡೆದ ಈ ಕಾರ್ಯಕ್ರಮ ಭಕ್ತಿಭಾವಕ್ಕೆ ಸಾಕ್ಷಿಯಾಯಿತು.

ಸಂಜೆ ಶ್ರೀ ರಾಜರಾಜೇಶ್ವರಿ ಪೂಜೆಯ ಬಳಿಕ ಕಲಾ ತಂಡದಿಂದ ನವಶಕ್ತಿ ಮತ್ತು ಪೌರಾಣಿಕ ವೈಭವದ ಪ್ರದರ್ಶನ ನಡೆಯಿತು. ನಂತರ ಪಾಲಕಿ ಉತ್ಸವ ಜರುಗಿತು.

ವಾಸವಿ ಮಹಿಳಾ ಮಂಡಳಿಯ ಅಧ್ಯಕ್ಷೆ ಸುಶೀಲಾ ರಾಮರಾವ್, ಉಪಾಧ್ಯಕ್ಷರಾದ ಆಶಾ ಸಂಪಗಾವಿ ಮತ್ತು ಸುಧಾ ರೊದ್ದಂ, ಕಾರ್ಯದರ್ಶಿ ಸುಜಾತಾ ಶೆಟ್ಟರ, ಸಹ ಕಾರ್ಯದರ್ಶಿ ವೇದಾ ಕಾಲವಾಡ, ಸಂಘಟನಾ ಕಾರ್ಯದರ್ಶಿ ಸುಧಾ ಮುತ್ತಗಿ ಹಾಗೂ ಖಜಾಂಚಿ ಸುಜಾತಾ ಹೆಗಡಿಕಟ್ಟಿ ಪಾಲ್ಗೊಂಡಿದ್ದರು.

ಆರ್ಯವೈಶ್ಯ ಸಮಾಜದ ಶ್ರೀ ನಗರೇಶ್ವರ ಟ್ರಸ್ಟ್ ಕಮಿಟಿಯ ಆಡಳಿತ ಮಂಡಳಿ ಅಧ್ಯಕ್ಷ ಎನ್. ರಾಮರಾವ್, ಉಪಾಧ್ಯಕ್ಷರಾದ ಕೃಷ್ಣಮೂರ್ತಿ ಸಂಪಗಾವಿ ಮತ್ತು ಸಂಜಯ ರೊದ್ದಂ, ಕಾರ್ಯದರ್ಶಿ ರಾಘವೇಂದ್ರ ಕಾಲವಾಡ, ಸಹ ಕಾರ್ಯದರ್ಶಿ ವೆಂಕಟೇಶ ಬೆಟದೂರ, ಸಂಘಟನಾ ಕಾರ್ಯದರ್ಶಿ ಸತೀಶ ಹೆಗಡಿಕಟ್ಟಿ ಹಾಗೂ ಖಜಾಂಚಿ ವೆಂಕಟೇಶ ಮುಂಡರಗಿ ಸೇ–ರಿದಂತೆ ಸಮಾಜದ ಹಿರಿಯರು ಮತ್ತು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ಟನ್ ಕಬ್ಬಿಗೆ ₹5,500 ಬೆಂಬಲ ಬೆಲೆ ನೀಡಿ: ಸಿ.ಎ. ಗಾಳೆಪ್ಪ ಆಗ್ರಹ



**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ವಿಜಯನಗರ ಜಿಲ್ಲೆಯ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಒಂದು ಟನ್ ಕಬ್ಬಿಗೆ ₹5,500 ಬೆಂಬಲ ಬೆಲೆ ನಿಗದಿಪಡಿಸಬೇಕು ಎಂದು ರೈತ ಸಂಘ ಹಾಗೂ ಹಸಿರು ಸೇನೆಯ ವಿಜಯನಗರ ಜಿಲ್ಲಾಧ್ಯಕ್ಷ ಸಿ.ಎ. ಗಾಳೆಪ್ಪ ಆಗ್ರಹಿಸಿದ್ದಾರೆ.

ಕಬ್ಬು ಬೆಳೆಯಲು ರೈತರು ಬೀಜ, ರಸಗೊಬ್ಬರ, ಕೀಟನಾಶಕ, ಕಾರ್ಮಿಕರ ಕೂಲಿ ಹಾಗೂ ನೀರಾವರಿ ಸೇರಿದಂತೆ ಹಲವು ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಕೃಷಿ ಉತ್ಪಾದನಾ ವೆಚ್ಚ ನಿರಂತರವಾಗಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಬೆಳೆದ ಕಬ್ಬಿಗೆ ಸೂಕ್ತ ಬೆಲೆ ದೊರೆಯದಿದ್ದರೆ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ. ಹೀಗಾಗಿ ರೈತರ ಉತ್ಪಾದನಾ ವೆಚ್ಚವನ್ನು ಪರಿಗಣಿಸಿ ಟನ್‌ಗೆ ₹5,500 ಬೆಂಬಲ ಬೆಲೆ ನಿಗದಿಪಡಿಸುವುದು ಅಗತ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ. ವಿಜಯನಗರ ಜಿಲ್ಲೆಯಾದ್ಯಂತ ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳಿಗೆ ಜಿಲ್ಲಾಡಳಿತ ಸ್ಪಂದಿಸಬೇಕು. ರೈತರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಅವರಿಗೆ ಅಗತ್ಯ ನೆರವು ಒದಗಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ವಿಜಯನಗರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕಬ್ಬು ಬೆಳೆಗಾರರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಗಮನ ಸೆಳೆಯುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಹಗರಿಬೊಮ್ಮನಹಳ್ಳಿ ತಾಲೂಕು ಅಧ್ಯಕ್ಷ ರಮೇಶ್, ಹೊಸಪೇಟೆ ತಾಲೂಕು ಅಧ್ಯಕ್ಷ ಮಂಜುನಾಥ್, ಕೊಟ್ಟೂರು ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಸಿ. ರೇಖಾ, ತಾಲೂಕು ಅಧ್ಯಕ್ಷೆ ಕಲಾವತಿ, ದುರುಗಪ್ಪ, ಪರಶುರಾಮ್, ಕಮಲಾಪುರ ಹೋಬಳಿ ಅಧ್ಯಕ್ಷ ಬಸಪ್ಪ, ಕೆಂಚಪ್ಪ, ವೆಂಕಟೇಶ್ ಪ್ರಭು, ಉಜಿನಿ ಗ್ರಾಮ ಘಟಕದ ಅಧ್ಯಕ್ಷೆ ಹುಲಿಗೆಮ್ಮ, ಮಲ್ಲಮ್ಮ ಸೇರಿದಂತೆ ರೈತ ಸಂಘದ ಕಾರ್ಯಕರ್ತರು ಉಪಸ್ಥಿತರಿದ್ದರು.

### ಹಳ್ಳಿಗಳ ಅಭಿವೃದ್ಧಿ, ಯುವಕರಿಗೆ ಉದ್ಯೋಗಕ್ಕೆ ತೋಂಟದ ಶ್ರೀಗಳ ಕರೆ

# ಗ್ರಾಮಗಳ ಬೆಳವಣಿಗೆಯಲ್ಲೇ ದೇಶದ ಏಳ್ಗೆ

**ವಿಜಯಸಾಕ್ಷಿ ಸುದ್ದಿ, ಗದಗ**

ಗ್ರಾಮಗಳು ಅಭಿವೃದ್ಧಿಯಾದಾಗ ಮಾತ್ರ ದೇಶದ ಆರ್ಥಿಕ ಪ್ರಗತಿ ಸಾಧ್ಯ. ಶಿಕ್ಷಣ, ಆರೋಗ್ಯ, ಕೃಷಿ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹಳ್ಳಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.



ಲಿಂಗಾಯತ ಪ್ರಗತಿಶೀಲ ಸಂಘದ 2819ನೇ ಶಿವಾನುಭವದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಹಳ್ಳಿಗಳು ಮತ್ತು ರೈತರು ದೇಶದ ಬೆನ್ನೆಲುಬು. ಗ್ರಾಮೀಣ ಯುವಕರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಬೇಕು. ಮಾನವ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿಕೊಂಡು ದುಡಿಯುವ ಕೈಗಳಿಗೆ ಉದ್ಯೋಗ ನೀಡಿದರೆ ದೇಶದ ಆರ್ಥಿಕತೆ ಬಲಗೊಳ್ಳಲಿದೆ ಎಂದರು.

ದೊಡ್ಡ ಕಾರ್ಖಾನೆಗಳಿಂದ ಹೊರಹೊಮ್ಮುವ ವಿಷಾನಿಲ ಹಾಗೂ ಕಲುಷಿತ ನೀರು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ವೈಜ್ಞಾನಿಕ ತಂತ್ರಜ್ಞಾನ ಬಳಸಿ ಇಂತಹ ದುಷ್ಪರಿಣಾಮಗಳನ್ನು ತಡೆಯುವುದು ಇಂದಿನ ಅಗತ್ಯವಾಗಿದೆ. ಮದ್ಯ ಮತ್ತು ಮಾದಕ ವಸ್ತುಗಳ ಬಳಕೆ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿ ಎಂದು ಹೇಳಿದರು.

ಗದಗ ವಾಣಿಜ್ಯೋದ್ಯಮ ಸಂಸ್ಥೆ 53 ವರ್ಷಗಳಿಂದ ಶ್ರೇಷ್ಠ ಕಾರ್ಯ ಮಾಡುತ್ತ ಬಂದಿದೆ. ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜಯದೇವ ಮೆಣಸಗಿ ಹಾಗೂ ಕಾರ್ಯದರ್ಶಿ ರಾಘವೇಂದ್ರ ಕಾಲವಾಡ ಅವರನ್ನು ಶ್ರೀಗಳು ಸನ್ಮಾನಿಸಿ, ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಶೀರ್ವದಿಸಿದರು. ಯುವಕರು ಮತ್ತು ಮಹಿಳೆಯರ ಸಬಲೀಕರಣಕ್ಕೆ ತಮ್ಮ ಕಾರ್ಯಾವಧಿಯಲ್ಲಿ ಆದ್ಯತೆ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಆಶಿಸಿದರು.

ತುಮಕೂರಿನ ನಿವೃತ್ತ ಶಿಕ್ಷಕ ನಂಜಯ್ಯ ನಾಲ್ಕು ವಿಶೇಷ ವಚನಗಳನ್ನು ವಿಶ್ಲೇಷಿಸಿ, ಪ್ರಕೃತಿಯ ವಿಸ್ಮಯಗಳನ್ನು ಶರಣರು ಆಳವಾಗಿ ಅಧ್ಯಯನ ಮಾಡಿದ್ದರು. ಆತ್ಮಕಲ್ಯಾಣದ ಜತೆಗೆ ಸಮಾಜ-ಕಲ್ಯಾಣದ ಆಶಯವನ್ನೂ ತಮ್ಮ ವಚನಗಳ ಮೂಲಕ ಸಾರಿದ್ದಾರೆ ಎಂದರು.

ಅತಿಥಿ ಉಪನ್ಯಾಸಕ ಡಾ. ಟಿ.ಎನ್. ಗೋಡಿ ಅವರು 'ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ವಾಣಿಜ್ಯ ಸಂಸ್ಥೆಗಳ ಪಾತ್ರ' ವಿಷಯ ಕುರಿತು ಮಾತನಾಡಿ, ಉದ್ಯೋಗಾಧಾರಿತ ಶಿಕ್ಷಣ ಪಡೆದು ಉದ್ಯೋಗಾವಕಾಶಗಳನ್ನು ಬಳಸಿಕೊಳ್ಳಬೇಕು. ನೈಸರ್ಗಿಕ, ಬೌದ್ಧಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಆರ್ಥಿಕ ಬೆಳವಣಿಗೆ ಸಾಧ್ಯ. ವ್ಯಾಪಾರ ವಾಣಿಜ್ಯ ಕ್ಷೇತ್ರದ ಬೇಡಿಕೆಗಳಿಗೆ ಅನುಗುಣವಾಗಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಬೇಕು. ವಿದೇಶಿ ಬಂಡವಾಳ ಹೂಡಿಕೆ ಹಾಗೂ ವ್ಯವಹಾರಕ್ಕೂ ಉತ್ತೇಜನ ನೀಡಬೇಕು ಎಂದರು.

> ಹಳ್ಳಿಗಳು ಮತ್ತು ರೈತರು ದೇಶದ ಬೆನ್ನೆಲುಬು. ಗ್ರಾಮೀಣ ಅಭಿವೃದ್ಧಿಯೊಂದಿಗೆ ಮಾನವ ಸಂಪನ್ಮೂಲವನ್ನು ಸದ್ಬಳಕೆ ಮಾಡಿಕೊಂಡರೆ ದೇಶದ ಆರ್ಥಿಕ ಪ್ರಗತಿ ಸಾಧ್ಯ.-
> 
> – ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು

ಆರ್ಥಿಕ ವ್ಯವಹಾರಗಳಲ್ಲಿ ವಿಶ್ವಾಸ ಅತ್ಯಗತ್ಯ. ವಿಶ್ವಾಸ ಉಳಿಯಬೇಕಾದರೆ ಪಾರದರ್ಶಕತೆ ಇರಬೇಕು ಎಂದು ಪ್ರತಿಪಾದಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಯದೇವ ಮೆಣಸಗಿ, ವಾಣಿಜ್ಯವಿಲ್ಲದೆ ದೇಶದ ಪ್ರಗತಿ ಸಾಧ್ಯವಿಲ್ಲ. ವಾಣಿಜ್ಯ ಕ್ಷೇತ್ರದ ಸಮಸ್ಯೆಗಳನ್ನು ಪರಿಹರಿಸಲು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಬೇಕು. ಉದ್ಯೋಗ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ವಾಣಿಜ್ಯೋದ್ಯಮ ಸಂಸ್ಥೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಪಾವನಿ ಮುನವಳ್ಳಿ ಮತ್ತು ಚೇತನ ವಚನ ಸಂಗೀತ ಹಾಡಿದರು. ಸೃಷ್ಟಿ ಪೂಜಾರ ಧರ್ಮಗ್ರಂಥ ಪಠಣ, ಶಾಂತಾ ಪೂಜಾರ ವಚನ ಚಿಂತನ ನಡೆಸಿಕೊಟ್ಟರು. ದಾಸೋಹ ಸೇವೆಯನ್ನು ಎಚ್.ಎಸ್. ಕಿಂದ್ರಿ ಹಾಗೂ ಚನ್ನಬಸಪ್ಪ ಅಂಗಡಿ ವಹಿಸಿಕೊಂಡಿದ್ದರು. ಸಂಘದ ಅಧ್ಯಕ್ಷ ಡಾ. ಉಮೇಶ ಪುರದ ಸ್ವಾಗತಿಸಿದರು. ಸುನಂದ ಪಿಳ್ಳೆ ಕಾರ್ಯಕ್ರಮ ನಿರೂಪಿಸಿದರು.

ಶಿವಾನುಭವದಲ್ಲಿ ಶಿವಾನುಭವ ಸಮಿತಿ ಅಧ್ಯಕ್ಷ ರಮೇಶ ಕಲ್ಲನಗೌಡರ, ಉಪಾಧ್ಯಕ್ಷ ಪ್ರಭು ಗಂಜಿಹಾಳ, ಸುರೇಖಾ ಪಿಳ್ಳೆ, ಕಾರ್ಯದರ್ಶಿ ಸಿದ್ಧರಾಮ ಪಟ್ಟೇದ, ಸಹಕಾರ್ಯದರ್ಶಿ ಪ್ರತಿಭಾ ಬಡ್ನಿ, ಕೋಶಾಧ್ಯಕ್ಷ ವೀರಣ್ಣ ಗೋಟಡಕಿ, ಕೆ.ಎಸ್. ಕೋರಿಮಠ, ಸೋಮಶೇಖರ ಪುರಾಣಿಮಠ, ಆದೇಶ ಅಂಗಡಿ ಸೇರಿದಂತೆ ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು.

## ರೇಣುಕಾದೇವಿ-ಮಹಾಪ್ರತ್ಯಂಗಿರಾದೇವಿ ದೇವಸ್ಥಾನ ನಿರ್ಮಾಣಕ್ಕೆ ಚಾಲನೆ



**ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಸಂಭಾಪೂರ ರಸ್ತೆಯಲ್ಲಿ ಶ್ರೀ ರೇಣುಕಾದೇವಿ ಮತ್ತು ಶ್ರೀ ಮಹಾ ಪ್ರತ್ಯಂಗಿರಾದೇವಿ ದೇವಸ್ಥಾನ ನಿರ್ಮಾಣ ಕಾರ್ಯಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗದಗ ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಜು ಕುರಡಗಿ ಹಾಗೂ ಬಿಜೆಪಿ ಧುರೀಣ ಪ್ರಶಾಂತ ನಾಯ್ಕರ್ ದೇವಸ್ಥಾನದ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿ, ಆರಾಧ್ಯ ದೇವಿಯ ದೇಗುಲ ನಿರ್ಮಾಣಕ್ಕೆ ಅಗತ್ಯ ಸಹಾಯ ಮತ್ತು ಸಹಕಾರ ನೀಡುವ ಭರವಸೆ ನೀಡಿದರು.

ಅತಿಥಿಗಳಾಗಿ ಹನುಮಂತಪ್ಪ ವೀರಾಪೂರ, ವಿನಾಯಕ ಹಬೀಬ, ರಾಹುಲ್ ಅರಳಿ ಹಾಗೂ ವಸಂತ ಪಡಗದ ಭಾಗವಹಿಸಿದ್ದರು.

ದೇವಿ ಆರಾಧಕಿ ಅನಿತಾ ಬಾಗಲಕೋಟ ಅಮ್ಮನವರು ಮಾತನಾಡಿ, ಗದಗದಲ್ಲಿ ಶ್ರೀ ರೇಣುಕಾದೇವಿ ಮತ್ತು ಶ್ರೀ ಮಹಾ ಪ್ರತ್ಯಂಗಿರಾದೇವಿ ದೇವಸ್ಥಾನ ನಿರ್ಮಾಣವಾಗಬೇಕೆಂಬ ಸದ್ಭಕ್ತರ ಸಂಕಲ್ಪ ಈಗ ಸಾಕಾರಗೊಳ್ಳುವ ಹಾದಿಯಲ್ಲಿದೆ. ಈ ಮಹತ್ಕಾರ್ಯಕ್ಕೆ ಭಕ್ತಾದಿಗಳು ಕೈಜೋಡಿಸಬೇಕು. ಎಲ್ಲರೂ ಧರ್ಮದ ಹಾದಿಯಲ್ಲಿ ಮುನ್ನಡೆಯಬೇಕು. ಶ್ರೀದೇವಿಯು ಸರ್ವರಿಗೂ ಸನ್ಮಂಗಲವನ್ನು ಕರುಣಿಸಲಿ ಎಂದು ಆಶಿಸಿದರು.

ಗೀತಾ ಗುಡೇನಕಟ್ಟಿ ಪ್ರಾರ್ಥಿಸಿದರು. ಅಶ್ವಿನಿ ಜಗತಾಪ ಸ್ವಾಗತಿಸಿದರು. ಗಂಗಾ ಚಕ್ರಣ್ಣವರ ಕಾರ್ಯಕ್ರಮ ನಿರೂಪಿಸಿದರು. ನಾಗವೇಣಿ ಕಟ್ಟಿಮನಿ ವಂದಿಸಿದರು.

ಕಾರ್ಯಕ್ರಮದಲ್ಲಿ ವಸಂತ ವೀರಾಪೂರ, ಶಿವಾಜಿಸಿಂಗ್ ರಜಪೂತ, ರವೀಂದ್ರ ನಾಯ್ಕರ್, ಸುಭಾಷ್ ಎಂ., ನವೀನಕುಮಾರ ಬಾಗಲಕೋಟ, ರಂಜನಾ ಕೋಟಿ, ಶೋಭಾ ಭಾಂಡಗೆ, ಶಾರದಾ ಸಜ್ಜನರ, ಶೋಭಾ ಗುಗ್ಗರಿ, ವಿಜಯಲಕ್ಷ್ಮೀ ಬಾಗಲಕೋಟ, ವೈಷ್ಣವಿ ಬಳ್ಳಾರಿ, ವಿಜಯಲಕ್ಷ್ಮೀ ಕುಬಸದ, ಕೌಶಲ್ಯ ಬದಿ, ಶಾಂತಾ ಬಾಕಳೆ, ವಿಜಯಲಕ್ಷ್ಮೀ ಕಾತರಕಿ, ಗೀತಾ ಮಾಗಿ, ಶಶಿಕಲಾ ಹಡಗಲಿಮಠ, ತೇಜಸ್ವಿನಿ ಬಾಗಲಕೋಟ, ಜ್ಯೋತಿ ತಿಪ್ಪಶೆಟ್ಟಿ, ಲಲಿತಾ ಕೋಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಾರುತಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ₹1.50 ಲಕ್ಷ ನೆರವು

**ವಿಜಯಸಾಕ್ಷಿ ಸುದ್ದಿ, ಬೆಟಗೇರಿ**



ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಘದ ವತಿಯಿಂದ ಬೆಟಗೇರಿಯ ಟರ್ನಲ್ ಪೇಟೆಯಲ್ಲಿರುವ ಮಾರುತಿ ದೇವಸ್ಥಾನದ ಕಟ್ಟಡದ ಜೀರ್ಣೋದ್ಧಾರಕ್ಕಾಗಿ ₹1.50 ಲಕ್ಷ ದೇಣಿಗೆ ನೀಡಲಾಗಿದೆ. ಸಂಘದ ಅಧಿಕಾರಿಗಳು ಚೆಕ್ ಮೂಲಕ ಸಹಾಯಧನ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶ್ರೀಕ್ಷೇತ್ರ ಧರ್ಮಸ್ಥಳದ ಗ್ರಾಮೀಣಾಭಿವೃದ್ಧಿ ಸಂಘದ ತಾಲೂಕು ಯೋಜನಾಧಿಕಾರಿ ಉಮಾ ಜಿ. ಮಾತನಾಡಿ, ದೇವಸ್ಥಾನದ ಟ್ರಸ್ಟ್ ಕಮಿಟಿಯವರು ಧರ್ಮಾಧಿಕಾರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಸಂದರ್ಭದಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ₹1.50 ಲಕ್ಷ ಸಹಾಯಧನ ನೀಡುವುದಾಗಿ ತಿಳಿಸಲಾಗಿತ್ತು.

ಇದೀಗ ಪ್ರಸಾದ ರೂಪದಲ್ಲಿ ದೊರೆತಿರುವ ಈ ನೆರವನ್ನು ದೇವಸ್ಥಾನದ ಕಟ್ಟಡದ ಜೀರ್ಣೋದ್ಧಾರಕ್ಕೆ ಬಳಸಿಕೊಂಡು ದೇವಸ್ಥಾನವು ಇನ್ನಷ್ಟು ಅಭಿವೃದ್ಧಿ ಹೊಂದಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಮೇಲ್ವಿಚಾರಕ ಪ್ರಕಾಶ ನಾಯಕ, ಪತ್ರಕರ್ತರಾದ ವೆಂಕಟೇಶ ಜಿ., ಮಲ್ಲಿಕಾರ್ಜುನ ಸಂಕನಗೌಡ್ರ, ಮಹಾದೇವಪ್ಪ ಮೇರವಾಡೆ ಅತಿಥಿಗಳಾಗಿ ಭಾಗವಹಿಸಿದ್ದರು. ಮಾರುತಿ ದೇವಸ್ಥಾನ ಮತ್ತು ಬನ್ನಿಮಹಾಕಾಳಿ ದೇವಸ್ಥಾನದ ಟ್ರಸ್ಟ್ ಕಮಿಟಿ ಅಧ್ಯಕ್ಷ ಮೋಹನಸಿಂಗ ಗಂಗಾವತಿ ಅಧ್ಯಕ್ಷತೆ ವಹಿಸಿದ್ದರು.

ಟ್ರಸ್ಟ್ ಕಮಿಟಿಯ ಪದಾಧಿಕಾರಿಗಳಾದ ಶ್ರೀನಿವಾಸ ಹುಬ್ಬಳ್ಳಿ, ತಿಮ್ಮಯ್ಯ ಗಣಪಾ, ಶಿವಪ್ಪ ಶಿರಗೇರಿ, ಶಂಕ್ರಪ್ಪ ಬೆನಕಲ್, ಪ್ರಕಾಶ ಬೆನಕಲ್, ರಾಮು ಕಾಂಬಳೇಕರ್, ತುಕಾರಾಮ ಅಂಕುಶಕಾನಿ, ಸೋಮನಾಥಸಾ ಮೇರವಾಡೆ, ಮಲ್ಲೇಶಪ್ಪ ಶಿಗ್ಲಿ, ಅರುಣ ಸಮೋರೆ, ಸಂಗಪ್ಪ ಹಡಪದ, ಈಶ್ವರಸಾ ಮೇರವಾಡೆ, ಈರಣ್ಣ ರೊಡ್ಡಾನವರ, ನೂರಂದ ರೊಡ್ಡಾನವರ, ಶಂಕರ ಕನಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮೈಸೂರು ದಸರಾ ಕರಾಟೆಯಲ್ಲಿ ಜಕ್ಕಲಿಯ ಪ್ರಜ್ವಲ್‌ಗೆ ಬೆಳ್ಳಿ ಪದಕ



**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಮೈಸೂರಿನಲ್ಲಿ ನಡೆದ 2026ನೇ ಸಾಲಿನ ದಸರಾ ಕ್ರೀಡಾಕೂಟದ ಕರಾಟೆ ಸ್ಪರ್ಧೆಯಲ್ಲಿ ನರೇಗಲ್ಲ ಸಮೀಪದ ಜಕ್ಕಲಿ ಗ್ರಾಮದ ಪ್ರಜ್ವಲಕುಮಾರ್ ಎಸ್. ಪೂಜಾರ ದ್ವಿತೀಯ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.

ನರೇಗಲ್ಲದ ಅನ್ನದಾನೇಶ್ವರ ಮಹಾವಿದ್ಯಾಲಯದ ಪದವಿ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಜ್ವಲಕುಮಾರ್, ಸಾಯಿ ಯೂಥ್ ಸ್ಪೋರ್ಟ್ಸ್ ಕರಾಟೆ ಕ್ಲಬ್‌ನಲ್ಲಿ ತರಬೇತುದಾರ ಆನಂದ ವಾಲ್ಮೀಕಿ ಅವರ ಮಾರ್ಗದರ್ಶನದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಕರಾಟೆ ಅಭ್ಯಾಸ ಮಾಡುತ್ತಿದ್ದಾರೆ.

2025-26ನೇ ಸಾಲಿನ 19 ವರ್ಷದೊಳಗಿನ ಪಿಯುಸಿ ವಿಭಾಗದ ಕರಾಟೆ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲೂ ಭಾಗವಹಿಸಿದ್ದರು.

ವಿದ್ಯಾಭ್ಯಾಸದ ಜತೆಗೆ ಕ್ರೀಡೆಯಲ್ಲಿಯೂ ಸಾಧನೆ ಮಾಡುತ್ತಿರುವ ಪ್ರಜ್ವಲಕುಮಾರ್ ಅವರ ಯಶಸ್ಸಿಗೆ ಹೆತ್ತವರು, ಕಾಲೇಜಿನ ಆಡಳಿತ ಮಂಡಳಿ, ಉಪನ್ಯಾಸಕರು ಹಾಗೂ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನ ಮಠದ ಜಗದ್ಗುರು ಮುಪ್ಪಿನ ಬಸವಲಿಂಗ ಸ್ವಾಮೀಜಿ, ಎಸ್‌ಎವಿವಿಪಿ ಸಮಿತಿಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಡಾ. ಜಿ.ಕೆ. ಕಾಳೆ, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಡಾ. ಎಸ್.ಎ. ಪಾಟೀಲ, ಪ್ರಾಚಾರ್ಯ ಡಾ. ಕಲ್ಲಯ್ಯ ಹಿರೇಮಠ, ದೈಹಿಕ ಶಿಕ್ಷಣ ನಿರ್ದೇಶಕ ಎಸ್.ಬಿ. ಗೌಡರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ತರಬೇತುದಾರ ಆನಂದ ವಾಲ್ಮೀಕಿ ಅಭಿನಂದಿಸಿದ್ದಾರೆ.

## ಡೆಂಗೀ, ಚಿಕೂನ್‌ಗುನ್ಯ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ



**ವಿಜಯಸಾಕ್ಷಿ ಸುದ್ದಿ, ಗದಗ**

ಡೆಂಗೀ ಹಾಗೂ ಚಿಕೂನ್‌ಗುನ್ಯ ಜ್ವರ ಹರಡುವುದನ್ನು ತಡೆಯಲು ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವುದರ ಜೊತೆಗೆ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕರಿಸಬೇಕು ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ.

ಈಡೀಸ್ ಈಜಿಪ್ಟೈ ಸೊಳ್ಳೆಯ ಕಡಿತದಿಂದ ಹರಡುವ ಈ ಕಾಯಿಲೆಗಳನ್ನು ನಿರ್ಲಕ್ಷಿಸಬಾರದು. ನಿಂತ ಸ್ವಚ್ಛ ನೀರಿನಲ್ಲಿ ಉತ್ಪತ್ತಿಯಾಗುವ ಈ ಸೊಳ್ಳೆಗಳು ಸಾಮಾನ್ಯವಾಗಿ ಹಗಲಿನಲ್ಲಿ ಕಚ್ಚುತ್ತವೆ. ಸಿಮೆಂಟ್ ತೊಟ್ಟಿಗಳು, ಬಕೆಟ್‌ಗಳು, ಡ್ರಂಗಳು, ಬ್ಯಾರಲ್‌ಗಳು, ಏರ್‌ಕೂಲರ್‌ಗಳು, ತೆಂಗಿನ ಚಿಪ್ಪುಗಳು, ಹಳೆಯ ಟೈರ್‌ಗಳು ಹಾಗೂ ಒಡೆದ ಡಬ್ಬಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.

ನೀರಿನ ತೊಟ್ಟಿಗಳು, ಡ್ರಂಗಳು ಮತ್ತು ಏರ್‌ಕೂಲರ್‌ಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಸ್ವಚ್ಛಗೊಳಿಸಬೇಕು.

ಬಳಿಕ ನೀರು ತುಂಬಿ ಮುಚ್ಚಳದಿಂದ ಮುಚ್ಚಬೇಕು. ಬಯಲಿನಲ್ಲಿ ಬಿದ್ದಿರುವ ಬಾಟಲಿ, ಡಬ್ಬ ಹಾಗೂ ಇತರ ತ್ಯಾಜ್ಯಗಳಲ್ಲಿ ಮಳೆನೀರು ಸಂಗ್ರಹವಾಗದಂತೆ ಎಚ್ಚರಿಕೆ ವಹಿಸಬೇಕು. ಸೊಳ್ಳೆ ಪರದೆ ಮತ್ತು ಸೊಳ್ಳೆ ನಿರೋಧಕಗಳನ್ನು ಬಳಸುವ ಮೂಲಕ ಸೊಳ್ಳೆ ಕಡಿತದಿಂದ ರಕ್ಷಿಸಿಕೊಳ್ಳಬೇಕು.

ಹಠಾತ್ ಅಧಿಕ ಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮೈ ಮತ್ತು ಕೀಲು ನೋವು, ವಾಕರಿಕೆ ಹಾಗೂ ವಾಂತಿ ಲಕ್ಷಣಗಳು ಕಂಡುಬಂದರೆ ತಕ್ಷಣ ಸಮೀಪದ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರಿಂದ ತಪಾಸಣೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯಬೇಕು. ಆರೋಗ್ಯ ಇಲಾಖೆಯ ಸೊಳ್ಳೆ ನಿಯಂತ್ರಣ ಕಾರ್ಯಗಳಿಗೆ ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕು ಎಂದು ಇಲಾಖೆ ತಿಳಿಸಿದೆ.

## ಕಬಡ್ಡಿಯಲ್ಲಿ ಎಸ್‌ಜೆಜೆಎಂ ವಿದ್ಯಾರ್ಥಿನಿಯರ ಸಾಧನೆ

**ವಿಜಯಸಾಕ್ಷಿ ಸುದ್ದಿ, ಮುಳಗುಂದ**



ಪಟ್ಟಣದ ಎಸ್‌ಜೆಜೆಎಂ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯದ ಪ್ರೌಢಶಾಲಾ ಬಾಲಕಿಯರ ಕಬಡ್ಡಿ ತಂಡ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು ಬೆಳಗಾವಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದೆ.

ಇದೇ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಪದವಿಪೂರ್ವ ಶಿಕ್ಷಣ ಇಲಾಖೆ ಹಾಗೂ ನರೇಗಲ್ಲದ ಎಸ್.ಎ. ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಕಬಡ್ಡಿಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟದ ಕ್ರೀಡಾಕೂಟಕ್ಕೂ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆಗೆ ದೈಹಿಕ ಶಿಕ್ಷಕರಾದ ಎಸ್.ವೈ. ಸಂಗೊಂದಿ, ಹಿರೇಗೌಡ್ರ ಹಾಗೂ ಪ್ರಾಚಾರ್ಯ ಎ.ಎಂ. ಅಂಗಡಿ ಅಭಿನಂದನೆ ಸಲ್ಲಿಸಿದ್ದಾರೆ.

## ಇಂದು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ

**ವಿಜಯಸಾಕ್ಷಿ ಸುದ್ದಿ, ಗದಗ**



ನವರಾತ್ರಿ ಉತ್ಸವದ ಅಂಗವಾಗಿ ನಗರದ ಮುಳಗುಂದ ನಾಕಾ ಸಮೀಪದ ಮರಾಠಾ ವಿದ್ಯಾವರ್ಧಕ ಸಂಘದ ಶ್ರೀ ಜಗದಂಬಾ ದೇವಸ್ಥಾನದಲ್ಲಿ ಅ. 16ರಂದು ಶುಕ್ರವಾರ ಸಂಜೆ 6 ಗಂಟೆಗೆ ಶ್ರೀದೇವಿ ಪುರಾಣ ಪ್ರವಚನ, ದಾಂಡಿಯಾ ಹಾಗೂ ನೃತ್ಯ ಕಾರ್ಯಕ್ರಮ ನಡೆಯಲಿದೆ.

ಹ.ಬ.ಫ. ಶ್ರೀ ರಮೇಶ ಮ. ಶೇಂಡ್ಗೆ ಅವರು ಶ್ರೀದೇವಿ ಪುರಾಣ ಪ್ರವಚನ ನಡೆಸಿಕೊಡಲಿದ್ದಾರೆ. ಬಳಿಕ ಶ್ರೀ ರಾಜಮಾತಾ ಜೀಜಾಬಾಯಿ ಮಹಿಳಾ ಮಂಡಳದವರಿಂದ ದಾಂಡಿಯಾ ಮತ್ತು ನೃತ್ಯ ಪ್ರದರ್ಶನ ನಡೆಯಲಿದೆ. ರಾತ್ರಿ 7.30ಕ್ಕೆ ಮುತ್ತೈದೆಯರಿಗೆ ಬಳೆ ಹಾಗೂ ಉಡಿ ತುಂಬುವ ಕಾರ್ಯಕ್ರಮ ಮತ್ತು ಅನ್ನಸಂತರ್ಪಣೆ ಜರುಗಲಿದೆ. ಮಹಾಪ್ರಸಾದ ಸೇವೆಯನ್ನು ಶ್ರೀ ಮೋಹನರಾವ್ ಯಲ್ಲಪ್ಪ ಗ್ವಾರಿ ಸಹೋದರರು ವಹಿಸಿಕೊಂಡಿದ್ದಾರೆ.

ನವರಾತ್ರಿ ಅಂಗವಾಗಿ ಪ್ರತಿದಿನ ಶ್ರೀದೇವಿ ಪುರಾಣ ಪ್ರವಚನದ ನಂತರ ಭಕ್ತರಿಗೆ ಪ್ರಸಾದ ವಿತರಿಸುತ್ತಿರುವ ಸಮಾಜದ ಹಿರಿಯರಾದ ಶ್ರೀ ಪರಶುರಾಮ ಯಲ್ಲಪ್ಪ ಜಾಧವ, ಶ್ರೀಮತಿ ರೇಣುಕಾಬಾಯಿ ಪವಾರ, ಶ್ರೀ ವಿನಿತಕುಮಾರ ಜಗತಾಪ, ಶ್ರೀ ಮಾರುತಿರಾವ್ ಆರ್. ಅರಳಿಕಟ್ಟಿ ಹಾಗೂ ಶ್ರೀ ಶಿವಾಜಿರಾವ ಪಾವನ ಅವರಿಗೆ ಸಂಘದ ವತಿಯಿಂದ ಕೃತಜ್ಞತೆ ಸಲ್ಲಿಸಲಾಗಿದೆ.

ಧಾರ್ಮಿಕ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು, ಮಹಿಳೆಯರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಸಂಘದ ಅಧ್ಯಕ್ಷ ಶ್ರೀ ಅರುಣಕುಮಾರ ಬಿ. ಚವ್ಹಾಣ ಹಾಗೂ ಗೌರವ ಕಾರ್ಯದರ್ಶಿ ಸುರೇಶ ಎಸ್. ಬೇಂದ್ರೆ ಜಂಟಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ರೋಗಿಗಳಿಗೆ ಆಹಾರ ಕಿಟ್ ವಿತರಣೆ




**ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಕ್ಷಯರೋಗಿಗಳ ಆರೋಗ್ಯ ಸುಧಾರಣೆ ಹಾಗೂ ಪೌಷ್ಟಿಕಾಂಶದ ಕೊರತೆ ನೀಗಿಸುವ ಉದ್ದೇಶದಿಂದ ಸಲಾಂ ಇಂಡಿಯಾ ಫೌಂಡೇಶನ್ ವತಿಯಿಂದ ಪಟ್ಟಣದ ಶ್ರೀ ಗಂಗಾವತಿ ವೆಂಕೋಬಣ್ಣನವರ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕ್ಷಯರೋಗಿಗಳಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ವಿತರಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕ್ಷಯರೋಗ ವಿಭಾಗದ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ರೋಗಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರ ಪೊಟ್ಟಣಗಳನ್ನು ವಿತರಿಸುವ ಮೂಲಕ ಅವರ ಆರೋಗ್ಯದ ಕಾಳಜಿಗೆ ವಿಶೇಷ ಒತ್ತು ನೀಡಲಾಯಿತು. ಕ್ಷಯರೋಗದ ಚಿಕಿತ್ಸೆಯೊಂದಿಗೆ ಸಮರ್ಪಕ ಪೌಷ್ಟಿಕ ಆಹಾರ ಸೇವನೆಯೂ ಅತ್ಯಂತ ಮಹತ್ವದ್ದಾಗಿದ್ದು, ರೋಗಿಗಳ ಚೇತರಿಕೆಗೆ ಪೂರಕವಾಗುವ ನಿಟ್ಟಿನಲ್ಲಿ ಫೌಂಡೇಶನ್ ಕೈಗೊಂಡಿರುವ ಈ ಕಾರ್ಯ ಶ್ಲಾಘನೀಯವಾಗಿದೆ. ಸಮಾಜದ ಆರೋಗ್ಯ ಕಾಪಾಡುವಲ್ಲಿ ಸರ್ಕಾರದ ಆರೋಗ್ಯ ಸೇವೆಗಳ ಜೊತೆಗೆ ಸಂಘ-ಸಂಸ್ಥೆಗಳ ಸಹಕಾರವೂ ಮಹತ್ವದ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಸಲಾಂ ಇಂಡಿಯಾ ಫೌಂಡೇಶನ್‌ನ ಪೌಷ್ಟಿಕ ಆಹಾರ ವಿತರಣಾ ಕಾರ್ಯವು ಮಾನವೀಯತೆ, ಸಾಮಾಜಿಕ ಕಳಕಳಿ ಮತ್ತು ಸೇವಾ ಮನೋಭಾವಕ್ಕೆ ಸಾಕ್ಷಿಯಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಬಾನಮ್ಮ, ಬಾಣದ ಶಿವಣ್ಣ, ಎನ್.ಎಂ. ಗೌಸ್ ಹಾಗೂ ರೈತ ಮುಖಂಡ ಗೋಣಿ ಬಸಪ್ಪ ಭಾಗವಹಿಸಿದ್ದರು. ಸಲಾಂ ಇಂಡಿಯಾ ಫೌಂಡೇಶನ್ ವತಿಯಿಂದ ಇದಾಯಿತ್, ನಜೀರ್ ಮತ್ತು ಕೀಮರಾಮ್ ಉಪಸ್ಥಿತರಿದ್ದರು.

ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಶಿವಕುಮಾರ, ಡಾ. ಪ್ರವೀಣ್, ಡಾ. ವಿನಾಯಕ, ಶಿವಲಿಂಗಪ್ಪ, ಲಿಂಗರಾಜ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಹಾಗೂ ಫೌಂಡೇಶನ್‌ನ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### ಅನ್ನದಾನೇಶ್ವರ ಕಾಲೋನಿಯಲ್ಲಿ ಮಹಿಳೆಯರಿಂದ ಧರ್ಮಜಾಗೃತಿ ಅಭಿಯಾನ

## ಮನೆಮನೆಗಳಲ್ಲಿ ಸಿದ್ಧಾಂತ ಶಿಖಾಮಣಿ ಪಠಣ

**ವಿಜಯಸಾಕ್ಷಿ ಸುದ್ದಿ, ನರೇಗಲ್ಲ**



ಮನೆಮನೆಗಳಲ್ಲಿ ಸಾಮೂಹಿಕ ಪ್ರಾರ್ಥನೆ, ಸಿದ್ಧಾಂತ ಶಿಖಾಮಣಿ ಪಠಣದ ಮೂಲಕ ಧಾರ್ಮಿಕ ಜಾಗೃತಿ ಮೂಡಿಸುವ ವಿನೂತನ ಅಭಿಯಾನವನ್ನು ಕೋಡಿಕೊಪ್ಪ-ನರೇಗಲ್ಲದ ಶ್ರೀ ಅನ್ನದಾನೇಶ್ವರ ಕಾಲೋನಿಯ ಮಹಿಳೆಯರು ಆರಂಭಿಸಿದ್ದಾರೆ.

ಪ್ರತಿ ವಾರ ಒಂದೊಂದು ಮನೆಯಲ್ಲಿ ಮಹಿಳೆಯರು ಒಗ್ಗೂಡಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಸಿದ್ಧಾಂತ ಶಿಖಾಮಣಿ ಧರ್ಮಗ್ರಂಥವನ್ನು ಪಠಿಸುತ್ತಾರೆ. ಶ್ರೀಮತಿ ನಿರ್ಮಲಾ ಹಿರೇಮಠ ಗುರುಮಾತೆಯವರು ಧರ್ಮಗ್ರಂಥದ ಪಠಣ ನಡೆಸಿಕೊಡುತ್ತಿದ್ದು, ಮಹಿಳೆಯರು ಅದರ ತಾತ್ವಿಕ ಸಂದೇಶಗಳನ್ನು ಮನನ ಮಾಡಿಕೊಳ್ಳುತ್ತಿದ್ದಾರೆ.

ಕುಟುಂಬದ ಜವಾಬ್ದಾರಿಗಳ ನಡುವೆಯೂ ಧಾರ್ಮಿಕ ಅಧ್ಯಯನಕ್ಕೆ ಸಮಯ ಮೀಸಲಿಡುವ ಮೂಲಕ ಸತ್ಯ, ಸದಾಚಾರ, ಸಹನೆ, ಪ್ರೀತಿ ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಉದ್ದೇಶ ಈ ಅಭಿಯಾನದ ಹಿಂದಿದೆ. ಮಹಿಳೆಯರಲ್ಲಿ ಪರಸ್ಪರ ಆತ್ಮೀಯತೆ ಬೆಳೆಸುವುದರ ಜೊತೆಗೆ, ಮುಂದಿನ ಪೀಳಿಗೆಗೆ ಉತ್ತಮ ಸಂಸ್ಕಾರಗಳನ್ನು ಪರಿಚಯಿಸುವ ಪ್ರಯತ್ನವೂ ಇದಾಗಿದೆ. ಹಿರೇಮಠದ ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯರ ಕೃಪಾಶೀರ್ವಾದದೊಂದಿಗೆ ಅಭಿಯಾನ ನಡೆಯುತ್ತಿದೆ.

ಅ. 13ರಂದು ಅನ್ನದಾನೇಶ್ವರ ಕಾಲೋನಿಯ ವಿರುಪಾಕ್ಷಯ್ಯ ಅಣ್ಣಿಗೇರಿಯವರ ಮನೆಯಲ್ಲಿ ಸಿದ್ಧಾಂತ ಶಿಖಾಮಣಿ ಪಠಣ ಕಾರ್ಯಕ್ರಮ ನಡೆಯಿತು. ಶ್ರೀಮತಿ ತ್ರಿವೇಣಿ ಗೌರಿಮಠ ಗುರುಮಾತೆಯವರು ಅಧ್ಯಕ್ಷತೆ ವಹಿಸಿದ್ದರು.

ಲಲಿತಾ ಪಲ್ಲೇದ, ಅಕ್ಕಮಹಾದೇವಿ ಗಾಣಿಗೇರ, ಸುಮಂಗಲಾ ಕೊಟ್ರಶೆಟ್ಟಿ, ಉಮಾ ಹುಯಿಲಗೇರಿ, ಪುಷ್ಪಾ ಹಿರೇವಡೆಯರ, ವಿಜಯಲಕ್ಷ್ಮೀ, ಜಯಶ್ರೀ ಪಾಟೀಲ, ಡಾ. ನಿರ್ಮಲಾ ನಾಶಿಪುಡಿ, ಶಾರದಾ ಬಿಂಗಿ, ರತ್ನಾ ವೀರಾಪೂರ, ಸರಸ್ವತಿ ಭೋಪಳಾಪೂರ, ದೀಪಾ ಸಾಗರ ಹಾಗೂ ಅನುಷಾ ಅಣ್ಣಿಗೇರಿಮಠ ಸೇರಿದಂತೆ ಅನೇಕ ಮಹಿಳೆಯರು ಪಾಲ್ಗೊಂಡಿದ್ದರು.

ಮನೆಮನೆಗಳಲ್ಲಿ ಧರ್ಮಗ್ರಂಥಗಳ ಪಠಣದ ಮೂಲಕ ಭಕ್ತಿ, ಬಾಂಧವ್ಯ ಹಾಗೂ ಸಂಸ್ಕಾರಗಳನ್ನು ಬೆಳೆಸುವ ಈ ಅಭಿಯಾನವು ಧಾರ್ಮಿಕ ಜಾಗೃತಿಯ ಜೊತೆಗೆ ಕುಟುಂಬ ಮತ್ತು ಸಮಾಜದಲ್ಲಿ ಸದ್ಭಾವನೆ ಬೆಳೆಸುವ ಆಶಯ ಹೊಂದಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka
Printed at : Sai Printing Press, Near Joda Maruti Temple, Gadag-582101, Dist : Gadag- Karnataka